भारत का राजपत्र
The Gazette of India
ಭಾರತ ರಾಜಪತ್ರ
**(Extraordinary)**
(ವಿಶೇಷ ಸಂಚಿಕೆ)
**भाग IX अनुभाग 1**
**PART IX SECTION 1**
ಭಾಗ **IX** ವಿಭಾಗ **1**
प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, शुक्रवार, मई 17, 2024<br>No.1, New Delhi, Friday, May 17, 2024<br>ನಂ.1, ನವದೆಹಲಿ, ಶುಕ್ರವಾರ, ಮೇ 17, 2024 | वैशाख 09, 1946 (शक)<br>Vaishakha 09, 1946 (saka)<br>ವೈಶಾಖ 09, 1946 (ಶಕ) | खंड.55<br>Vol. 55<br>ಸಂಪುಟ.55 |

**Ministry of Law and Justice**
(Legislative Department)
New Delhi, 17th May, 2024

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 17ನೇ ಮೇ, 2024**

The Translation in Kannada of the following Acts, namely:- (1) THE DISASTER MANAGEMENT ACT, 2005 (NO.53 OF 2005) (2) THE STREET VENDORS (PROTECTION OF LIVELIHOOD AND REGULATION OF STREET VENDING) ACT, 2014 (NO.7 OF 2014) (3)THE COMMERCIAL COURTS ACT, 2015 (NO.4 OF 2016) (4) THE TRIBUNALS REFORMS ACT, 2021 (NO.33 OF 2021) (5) THE SURROGACY (REGULATION) ACT, 2021 (NO.47 OF 2021) - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

**ಬಾಡಿಗೆ–ತಾಯ್ತನ (ವಿನಿಯಮನ) ಅಧಿನಿಯಮ, 2021**

**(2021ರ ಸಂಖ್ಯೆ 47)**

[25ನೇ ಡಿಸೆಂಬರ್, 2021.]

ಬಾಡಿಗೆ–ತಾಯ್ತನ ಪದ್ಧತಿ ಮತ್ತು ಪ್ರಕ್ರಿಯೆಯನ್ನು ವಿನಿಯಮಿಸುವುದಕ್ಕಾಗಿ ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ಮತ್ತು ಬಾಡಿಗೆ–ತಾಯ್ತನ ಮಂಡಲಿ, ರಾಜ್ಯ ಸಹಾಯಕ ಸಂತಾನೋತ್ಪತ್ತಿ ಮತ್ತು ಬಾಡಿಗೆ–ತಾಯ್ತನ ಮಂಡಲಿಗಳನ್ನು ರಚಿಸುವುದಕ್ಕಾಗಿ ಮತ್ತು ಸಮುಚಿತ ಪ್ರಾಧಿಕಾರಗಳನ್ನು ನೇಮಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಬಾಡಿಗೆ–ತಾಯ್ತನ (ವಿನಿಯಮನ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪರಿತ್ಯಕ್ತ ಮಗು" ಎಂದರೆ, ಬಾಡಿಗೆ–ತಾಯ್ತನ ಕಾರ್ಯವಿಧಾನದಿಂದ ಜನಿಸಿರುವ, ಮಗು ಬಯಸುವ ಪಾಲಕರು ಅಥವಾ ಪೋಷಕರಿಂದ ತೊರೆಯಲ್ಪಟ್ಟಿರುವ ಮತ್ತು ಹಾಗೆ ಪರಿತ್ಯಕ್ತವಾಗಿರುವುದಾಗಿ ಸಮುಚಿತ ಪ್ರಾಧಿಕಾರದಿಂದ, ಯುಕ್ತ ವಿಚಾರಣೆಯ ತರುವಾಯ ಘೋಷಿತವಾಗಿರುವ ಮಗು;

(ಬಿ) "ಸದಾಶಯದ ಬಾಡಿಗೆ–ತಾಯ್ತನ" ಎಂದರೆ, ಬಾಡಿಗೆ–ತಾಯಿಗೆ ವಹಿಸಿದ/ತಗಲುವ ವೈದ್ಯಕೀಯ ವೆಚ್ಚಗಳು ಮತ್ತು ನಿಯಮಿಸಿದಂಥ ವೆಚ್ಚಗಳು ಮತ್ತು ಬಾಡಿಗೆ ತಾಯಿಗಾಗಿನ ವಿಮೆಯನ್ನು ಬಾಡಿಗೆ–ತಾಯಿ ಅಥವಾ ಅವಳ ಅವಲಂಬಿತರು ಅಥವಾ ಅವಳ ಪ್ರತಿನಿಧಿಗೆ ನೀಡುವುದನ್ನು ಹೊರತುಪಡಿಸಿ, ಇತರ ಯಾವುವೇ ಚಾರ್ಜುಗಳು, ವೆಚ್ಚಗಳು, ಶುಲ್ಕಗಳು, ಸಂಭಾವನೆ ಅಥವಾ ಯಾವುದೇ ಸ್ವರೂಪದ ಹಣಕಾಸು ಪ್ರಯೋಜನಗಳನ್ನು ಪಡೆಯದ ಬಾಡಿಗೆ–ತಾಯ್ತನ;

(ಸಿ) "ಸಮುಚಿತ ಪ್ರಾಧಿಕಾರ" ಎಂದರೆ, 35ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಮುಚಿತ ಪ್ರಾಧಿಕಾರ;

(ಡಿ) "ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮ" ಎಂದರೆ, ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ (ವಿನಿಯಮನ) ಅಧಿನಿಯಮ, 2021;

(ಇ) "ಮಂಡಲಿ" ಎಂದರೆ, 17ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿ;

(ಎಫ್) "ಚಿಕಿತ್ಸಾ ಕಾರ್ಯಸಂಸ್ಥೆ" ಎಂಬುದು ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ 23)ರಲ್ಲಿ ಅದಕ್ಕೆ ನೀಡಲಾಗಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಜಿ) "ವಾಣಿಜ್ಯಕ ಬಾಡಿಗೆ–ತಾಯ್ತನ" ಎಂದರೆ, ಇದರಲ್ಲಿ, ಮಾನವ ಗರ್ಭವನ್ನು ಮಾರುವುದು ಅಥವಾ ಖರೀದಿಸುವುದು ಅಥವಾ ಮಾನವ ಗರ್ಭ ಅಥವಾ ಕೂಟಜೀವಕಣವನ್ನು (ಗಮೀಟು) ಮಾರುವ ಅಥವಾ ಖರೀದಿಸುವ ವ್ಯಾಪಾರ ಮಾಡುವುದು ಅಥವಾ ಬಾಡಿಗೆ–ತಾಯಿಗೆ ತಗಲುವ ವೈದ್ಯಕೀಯ ವೆಚ್ಚ ಮತ್ತು ನಿರ್ದಿಷ್ಟಪಡಿಸಿದಂಥ ಇತರ ವೆಚ್ಚಗಳು

ಮತ್ತು ಬಾಡಿಗೆ–ತಾಯಿಗಾಗಿನ ವಿಮೆ ಹೊರತುಪಡಿಸಿ, ಬಾಡಿಗೆ–ತಾಯಿಗೆ ಅಥವಾ ಅವಳ ಅವಲಂಬಿತರಿಗೆ ಅಥವಾ ಅವಳ ಪ್ರತಿನಿಧಿಗೆ ಪಾವತಿ, ಬಹುಮಾನ, ಪ್ರಯೋಜನ, ಶುಲ್ಕ, ಸಂಭಾವನೆ ಅಥವಾ ನಗದು ಅಥವಾ ವಸ್ತುರೂಪದಲ್ಲಿ ಹಣಕಾಸಿನ ಪ್ರಯೋಜನವನ್ನು ನೀಡುವ ಮೂಲಕ ಬಾಡಿಗೆ–ತಾಯ್ತನದ ಸೇವೆಗಳನ್ನು ಮಾರುವುದು ಅಥವಾ ಖರೀದಿಸುವುದು ಅಥವಾ ವ್ಯಾಪಾರ ಮಾಡುವುದು ಸೇರಿದಂತೆ, ಬಾಡಿಗೆ–ತಾಯ್ತನ ಸೇವೆಗಳು ಅಥವಾ ಕಾರ್ಯವಿಧಾನಗಳನ್ನು ಅಥವಾ ಅದರ ಘಟಕಾಂಶ ಸೇವೆಗಳು ಅಥವಾ ಘಟಕಾಂಶ ಕಾರ್ಯವಿಧಾನಗಳನ್ನು ವಾಣಿಜ್ಯೀಕರಿಸುವುದು.

(ಹೆಚ್) "ದಂಪತಿ" ಎಂದರೆ, ಅನುಕ್ರಮವಾಗಿ ಇಪ್ಪತ್ತೊಂದು ಮತ್ತು ಹದಿನೆಂಟು ವಯಸ್ಸು ದಾಟಿದ ಕಾನೂನುಬದ್ಧವಾಗಿ ವಿವಾಹವಾದ ಭಾರತೀಯ ಗಂಡು ಮತ್ತು ಹೆಣ್ಣು;

(ಐ) "ಅಂಡ" ಎಂಬುದು ಸ್ತ್ರೀ ಕೂಟಜೀವಕಣವನ್ನು ಒಳಗೊಳ್ಳುತ್ತದೆ;

(ಜೆ) "ಗರ್ಭ" ಎಂದರೆ, ಗರ್ಭಾಂಕುರದ ನಂತರ ಐವತ್ತಾರು ದಿನಗಳ ಕೊನೆವರೆಗೆ ಬೆಳೆಯುತ್ತಿರುವ ಅಥವಾ ಬೆಳೆದಿರುವ ಮಾನವ ಜೀವಾಣು;

(ಕೆ) "ಭ್ರೂಣತಜ್ಞ" ಎಂದರೆ, ಎರಡು ವರ್ಷಗಳಿಗಿಂತ ಕಡಿಮೆಯಿರದಷ್ಟು ಚಿಕಿತ್ಸಾ ಅನುಭವ ಹೊಂದಿರುವ, ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಭ್ರೂಣ ವಿಜ್ಞಾನ ಅಥವಾ ಚಿಕಿತ್ಸಕ ಭ್ರೂಣ ವಿಜ್ಞಾನದ ಕ್ಷೇತ್ರದಲ್ಲಿ ಯಾವುದೇ ಸ್ನಾತಕೋತ್ತರ ವೈದ್ಯಕೀಯ ಅರ್ಹತೆ ಅಥವಾ ವೈದ್ಯಕೀಯ ಪದವಿ ಹೊಂದಿರುವಂಥ ವ್ಯಕ್ತಿ;

(ಎಲ್) "ಫಲವತ್ತೀಕರಣ" ಎಂದರೆ, ರೇತಸ್ಸು ಅಂಡಾಣುವನ್ನು ಪ್ರವೇಶಿಸುವಿಕೆ ಮತ್ತು ಯುಗ್ಮಜದ ಬೆಳವಣಿಗೆಗೆ ಕಾರಣವಾಗುವಂಥ ಆನುವಂಶಿಕ ದ್ರವ್ಯದ ಸಮ್ಮಿಳನ;

(ಎಂ) "ಭ್ರೂಣ" ಎಂದರೆ, ಗರ್ಭಾಂಕುರದ ಅಥವಾ ಸೃಷ್ಟಿಯಾದ ನಂತರದ ಐವತ್ತೇಳನೇ ದಿನದಿಂದ ಆರಂಭವಾಗಿ (ಅದರ ಬೆಳವಣಿಗೆಯು ಯಾವುದೇ ಸಮಯದಲ್ಲಿ ತಾತ್ಕಾಲಿಕವಾಗಿ ನಿಂತಿದ್ದರೆ ಆ ಸಮಯವನ್ನು ಹೊರತುಪಡಿಸಿ) ಜನನದಲ್ಲಿ ಕೊನೆಯಾಗುವ ಅದರ ಬೆಳವಣಿಗೆಯ ಅವಧಿಯಲ್ಲಿನ ಮಾನವ ಜೀವಾಣು;

(ಎನ್) "ಕೂಟಜೀವಕಣ" ಎಂದರೆ, ವೀರ್ಯ ಮತ್ತು ಫಲಿತವಾಗದ ಅಂಡಾಶಯಕಣ (ಓಅಸೈಟು);

(ಒ) "ಸ್ತ್ರೀರೋಗತಜ್ಞ" ಎಂದರೆ, ಗರ್ಭಧಾರಣಾ ಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994 (1994ರ 57)ರಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಪಿ) "ಅಂತರ್ನಿವೇಶನ" ಎಂದರೆ, ಫಲವತ್ತೀಕರಣದ ನಂತರದ ಐದರಿಂದ ಏಳು ದಿನಗಳಲ್ಲಿ ಪ್ರಾರಂಭವಾಗುವಂಥ ಝೋನಾ–ಫ್ರೀ ಬ್ಲಾಸ್ಟೋಸಿಸ್ಟ್‌ನ ಮೂಲಕ ಕೂಡಿಕೊಳ್ಳುವಿಕೆ ಮತ್ತು ಆನಂತರದಲ್ಲಿ ಪ್ರವೇಶಿಸುವಿಕೆ;

(ಕ್ಯೂ) "ವಿಮೆ" ಎಂದರೆ, ಒಂದು ಕಂಪನಿ, ವ್ಯಕ್ತಿ ಅಥವಾ ಮಗು ಬಯಸುವ ದಂಪತಿಯು, ಬಾಡಿಗೆ–ತಾಯಿಯ ವೈದ್ಯಕೀಯ ವೆಚ್ಚಗಳು, ಆರೋಗ್ಯ ಸಮಸ್ಯೆಗಳು, ನಿರ್ದಿಷ್ಟ ನಷ್ಟ, ಹಾನಿ, ಅನಾರೋಗ್ಯ ಅಥವಾ ಸಾವಿಗಾಗಿ ಅಥವಾ ಬಾಡಿಗೆ–ತಾಯ್ತನ ಪ್ರಕ್ರಿಯೆಯ ಅವಧಿಯಲ್ಲಿ ಅಂಥ ಬಾಡಿಗೆ–ತಾಯಿಗೆ ತಗಲುವ ಇನ್ನಿತರ ನಿರ್ದಿಷ್ಟ ವೆಚ್ಚಗಳಿಗಾಗಿ ಪರಿಹಾರದ ಖಾತರಿ ಒದಗಿಸಲು ಮಾಡಿಕೊಳ್ಳುವ ವ್ಯವಸ್ಥೆ;

(ಆರ್) "ಮಗು ಬಯಸುವ ದಂಪತಿ" ಎಂದರೆ, ಗರ್ಭಧಾರಣೆಗೆ ಸಂಬಂಧಿಸಿದಂತೆ ಬಾಡಿಗೆ–ತಾಯ್ತನ ಅವಶ್ಯವಿರುವುದಾಗಿ ವೈದ್ಯಕೀಯ ಸೂಚನೆಯಿರುವಂಥ ಮತ್ತು ಬಾಡಿಗೆ–ತಾಯ್ತನದ ಮೂಲಕ ಪಾಲಕರಾಗಲು ಉದ್ದೇಶಿಸಿರುವಂಥ ದಂಪತಿ;

(ಎಸ್) "ಮಗು ಬಯಸುವ ಮಹಿಳೆ" ಎಂದರೆ, 35 ರಿಂದ 45 ವಯೋಮಾನದ ನಡುವಿನಲ್ಲಿರುವಂಥ ಮತ್ತು ಬಾಡಿಗೆ–ತಾಯ್ತನದ ಸೌಲಭ್ಯ ಪಡೆಯಲು ಉದ್ದೇಶಿಸಿರುವಂಥ ವಿಧವೆ ಅಥವಾ ವಿಚ್ಛೇದಿತ ಭಾರತೀಯ ಮಹಿಳೆ;

(ಟಿ) "ಸದಸ್ಯ" ಎಂದರೆ, ಸಂದರ್ಭಾನುಸಾರ, ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿ ಅಥವಾ ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿಯ ಸದಸ್ಯ;

(ಯು) "ಅಧಿಸೂಚನೆ" ಎಂದರೆ, ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ವಿ) "ಅಂಡಾಶಯಕಣ (ಓಅಸೈಟು)" ಎಂದರೆ, ಸ್ತ್ರೀ ಜನನಾಂಗದಲ್ಲಿ ಸ್ವಾಭಾವಿಕವಾಗಿ ಅಂಡೋತ್ಪತ್ತಿ ಮಾಡುವ ಅಂಡಾಶಯಕಣ (ಓಅಸೈಟು);

(ಡಬ್ಲ್ಯೂ) "ಮಕ್ಕಳವೈದ್ಯತಜ್ಞ" ಎಂದರೆ, ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಅಡಿಯಲ್ಲಿ ಮಾನ್ಯವಾದ ಮಕ್ಕಳವೈದ್ಯ ವಿಜ್ಞಾನದಲ್ಲಿ ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರುವಂಥ ವ್ಯಕ್ತಿ;

(ಎಕ್ಸ್) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಮೇರೆಗೆ ನಿಯಮಗಳ ಮೂಲಕ ನಿಯಮಿಸಲಾದುದು;

(ವೈ) "ನೋಂದಾಯಿತ ವೃತ್ತಿನಿರತ ವೈದ್ಯ" ಎಂದರೆ, ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ 2ನೇ ಪ್ರಕರಣದ ಖಂಡ (ಹೆಚ್)ನಲ್ಲಿ ಪರಿಭಾಷಿಸಲಾದಂತೆ ಯಾವುದೇ ನೋಂದಾಯಿತ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ರಾಜ್ಯ ವೈದ್ಯಕೀಯ ವಹಿಯಲ್ಲಿ ಹೆಸರು ನೋಂದಾಯಿತವಾದ ವೃತ್ತಿನಿರತ ವೈದ್ಯ;

(ಝಡ್) "ವಿನಿಯಮ" ಎಂದರೆ, ಈ ಅಧಿನಿಯಮದ ಮೇರೆಗೆ ಮಂಡಲಿ ರಚಿಸಿದ ವಿನಿಯಮಗಳು;

(ಝಡ್ಎ) "ಲಿಂಗ ಆಯ್ಕೆ"ಯು ಗರ್ಭಧಾರಣಾ ಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ, 1994 (1994ರ 57)ರ 2ನೇ ಪ್ರಕರಣದ ಖಂಡ (ಒ) ನಲ್ಲಿ ಅದಕ್ಕೆ ನೀಡಲಾದಂಥದೇ ಅರ್ಥ ಹೊಂದಿರತಕ್ಕದ್ದು;

(ಝಡ್ಬಿ) "ರಾಜ್ಯ ಮಂಡಲಿ" ಎಂದರೆ, 26ನೇ ಪ್ರಕರಣದ ಮೇರೆಗೆ ರಚಿಸಲಾದ ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿ;

(ಝಡ್ಸಿ) ವಿಧಾನಮಂಡಲವುಳ್ಳ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ "ರಾಜ್ಯ ಸರ್ಕಾರ" ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯಿಂದ ನೇಮಕಗೊಂಡ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರ;

(ಝಡ್ಡಿ) "ಬಾಡಿಗೆ-ತಾಯ್ತನ" ಎಂದರೆ, ಮಗುವಿನ ಜನನದ ನಂತರ ಮಗುವನ್ನು ಮಗು ಬಯಸುವ ದಂಪತಿಗೆ ಒಪ್ಪಿಸುವ ಉದ್ದೇಶದಿಂದ ಒಬ್ಬ ಮಹಿಳೆಯು ಮಗು ಬಯಸುವ ದಂಪತಿಗಾಗಿ ಗರ್ಭಧರಿಸಿ, ಮಗುವಿಗೆ ಜನ್ಮ ನೀಡುವ ಪದ್ಧತಿ.

(ಝಡ್ಇ) "ಬಾಡಿಗೆ-ತಾಯ್ತನ ಚಿಕಿತ್ಸಾಲಯ" ಎಂದರೆ, ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಸೇವೆಗಳು, ಕೃತಕ ಗರ್ಭಧಾರಣೆ (ಇನ್‌ವಿಟ್ರೋ ಫರ್ಟಿಲೈಸೇಷನ್- ಐವಿಎಫ್) ಸೇವೆಗಳು, ಆನುವಂಶಿಕ ಸಮಾಲೋಚನಾ ಕೇಂದ್ರ, ಆನುವಂಶಿಕ ಪ್ರಯೋಗಾಲಯ, ಬಾಡಿಗೆ-ತಾಯ್ತನ ಕಾರ್ಯವಿಧಾನವನ್ನು ನಡೆಸುವಂಥ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಬ್ಯಾಂಕುಗಳು ಅಥವಾ ಯಾವುದೇ ರೂಪದಲ್ಲಿ ಬಾಡಿಗೆ-ತಾಯ್ತನ ಕಾರ್ಯವಿಧಾನಗಳನ್ನು ನಡೆಸುವಂಥ, ಯಾವುದೇ ಹೆಸರಿನಿಂದ ಕರೆಯಲಾಗುವಂಥ ಯಾವುದೇ ಚಿಕಿತ್ಸಾ ಕಾರ್ಯಸಂಸ್ಥೆ;

(ಝಡ್ಎಫ್) "ಬಾಡಿಗೆ-ತಾಯ್ತನ ಕಾರ್ಯವಿಧಾನಗಳು" ಎಂದರೆ, ಬಾಡಿಗೆ-ತಾಯ್ತನದಲ್ಲಿನ ಮಾನವ ಕೂಟಜೀವಕಣಗಳು ಮತ್ತು ಮಾನವ ಗರ್ಭವನ್ನು ನಿರ್ವಹಿಸುವಲ್ಲಿ ತೊಡಗಿರುವಂಥ ಎಲ್ಲಾ ಸ್ತ್ರೀ ವೈದ್ಯಕೀಯ, ಪ್ರಸೂತಿ ವೈದ್ಯಕೀಯ ಅಥವಾ ವೈದ್ಯಕೀಯ ಕಾರ್ಯವಿಧಾನಗಳು, ತಂತ್ರಗಳು, ಸೂಕ್ಷ್ಮಪರೀಕ್ಷೆಗಳು, ಪದ್ಧತಿಗಳು ಅಥವಾ ಸೇವೆಗಳು.

(ಝಡ್‌ಜಿ) "ಬಾಡಿಗೆ-ತಾಯಿ" ಎಂದರೆ, 4ನೇ ಪ್ರಕರಣದ (iii)ನೇ ಖಂಡದ (ಬಿ) ಉಪಖಂಡದಲ್ಲಿ ಉಪಬಂಧಿಸಲಾದಂತೆ, ತನ್ನ ಗರ್ಭದಲ್ಲಿ ಗರ್ಭವನ್ನು ಅಂತರ್ನಿವೇಶಿಸಿಕೊಂಡು ಬಾಡಿಗೆ-ತಾಯ್ತನದ ಮೂಲಕ ಮಗುವನ್ನು

ಹೆತ್ತುಕೊಡಲು ಒಪ್ಪಿಕೊಳ್ಳುವಂಥ (ಮಗು ಬಯಸುವ ದಂಪತಿ ಅಥವಾ ಮಹಿಳೆಯೊಂದಿಗೆ ಆನುವಂಶಿಕ ಸಂಬಂಧ ಹೊಂದಿರುವಂಥ) ಮತ್ತು ಷರತ್ತುಗಳನ್ನು ಪೂರೈಸುವಂಥ ಮಹಿಳೆ;

(ಝೆಡ್‌ಎಚ್) "ಯುಗ್ಮಜ" ಎಂದರೆ, ಮೊದಲನೇ ಕೋಶ ವಿಭಾಗಕ್ಕೆ ಮುಂಚಿನ ಫಲವತ್ತಾದ ಅಂಡಾಶಯಕಣ (ಓಅಸೈಟು).

(2) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿರದ, ಆದರೆ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಆ ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

## ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ವಿನಿಯಮನ

3. **ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ನಿಷೇಧ ಮತ್ತು ವಿನಿಯಮನ.–** ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಮತ್ತು ದಿನಾಂಕದಿಂದ,–

(i) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯವು, ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಿದ್ದ ಹೊರತು, ಬಾಡಿಗೆ–ತಾಯ್ತನಕ್ಕೆ ಮತ್ತು ಬಾಡಿಗೆ–ತಾಯ್ತನ ಕಾರ್ಯವಿಧಾನಗಳಿಗೆ ಸಂಬಂಧಪಟ್ಟ ಯಾವುದೇ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ ಅಥವಾ ನಡೆಸಲು ಜೊತೆಗೂಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿಯೂ ಸಹಾಯ ಮಾಡತಕ್ಕದ್ದಲ್ಲ.

(ii) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ಮಕ್ಕಳವೈದ್ಯತಜ್ಞ, ಸ್ತ್ರೀರೋಗತಜ್ಞ, ಭ್ರೂಣತಜ್ಞ, ನೋಂದಾಯಿತ ವೃತ್ತಿನಿರತ ವೈದ್ಯ ಅಥವಾ ಇತರ ಯಾರೇ ವ್ಯಕ್ತಿಯು ಯಾವುದೇ ರೂಪದಲ್ಲಿ ವಾಣಿಜ್ಯಕ ಬಾಡಿಗೆ–ತಾಯ್ತನವನ್ನು ನಡೆಸುವುದಾಗಲೀ, ಅವಕಾಶ ಮಾಡಿಕೊಡುವುದಾಗಲೀ, ಕೈಗೊಳ್ಳುವುದಾಗಲೀ, ಉತ್ತೇಜಿಸುವುದಾಗಲೀ ಅಥವಾ ಜೊತೆಗೂಡುವುದಾಗಲೀ ಅಥವಾ ಹೊಂದುವುದಾಗಲೀ ಮಾಡತಕ್ಕದ್ದಲ್ಲ;

(iii) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯವು, ನಿರ್ದಿಷ್ಟಪಡಿಸಬಹುದಾದಂಥ ಅರ್ಹತೆಗಳನ್ನು ಹೊಂದಿರದಂಥ ಯಾರೇ ವ್ಯಕ್ತಿಯನ್ನು ಗೌರವಾರ್ಥವಾಗಿ ಅಥವಾ ಪಾವತಿಯಾಧಾರದ ಮೇಲೆ ನಿಯೋಜಿಸಿಕೊಳ್ಳತಕ್ಕದ್ದಲ್ಲ ಅಥವಾ ನಿಯೋಜಿಸಿಕೊಳ್ಳುವುದಕ್ಕೆ ಕಾರಣವಾಗತಕ್ಕದ್ದಲ್ಲ ಅಥವಾ ಆತನ ಸೇವೆಗಳನ್ನು ಪಡೆಯತಕ್ಕದ್ದಲ್ಲ;

(iv) ಯಾರೇ ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ ಅಥವಾ ಇತರ ಯಾರೇ ವ್ಯಕ್ತಿಯು, ತಾನಾಗಿಯಾಗಲೀ ಅಥವಾ ಯಾರೇ ಇತರ ವ್ಯಕ್ತಿಯ ಮುಖಾಂತರವಾಗಿಯಾಗಲೀ, ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಬಾಡಿಗೆ–ತಾಯ್ತನ ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದಲ್ಲ ಅಥವಾ ಕೈಗೊಳ್ಳುವುದಕ್ಕೆ ಸಹಾಯ ಮಾಡತಕ್ಕದ್ದಲ್ಲ;

(v) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ ಅಥವಾ ಇತರ ಯಾರೇ ವ್ಯಕ್ತಿಯು,–

(ಎ) ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸುವಂತೆ ಯಾರೇ ಮಹಿಳೆಯನ್ನು ಪ್ರಚೋದಿಸುವ ಗುರಿ ಹೊಂದಿರುವ ಅಥವಾ ಪ್ರಚೋದಿಸುವ ಸಂಭವವಿರುವ;

(ಬಿ) ವಾಣಿಜ್ಯಕ ಬಾಡಿಗೆ–ತಾಯ್ತನಕ್ಕಾಗಿ ಬಾಡಿಗೆ–ತಾಯ್ತನ ಚಿಕಿತ್ಸಾಲಯವನ್ನು ಉತ್ತೇಜಿಸುವ ಅಥವಾ ಸಾಮಾನ್ಯವಾಗಿ ವಾಣಿಜ್ಯಕ ಬಾಡಿಗೆ–ತಾಯ್ತನವನ್ನು ಉತ್ತೇಜಿಸುವ ಗುರಿ ಹೊಂದಿರುವ;

(ಸಿ) ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸಲು ಮಹಿಳೆಯನ್ನು ಕೋರುವ ಅಥವಾ ಕೋರುವ ಗುರಿಯಿರುವ;

(ಡಿ) ಮಹಿಳೆಯು ಬಾಡಿಗೆ–ತಾಯಿಯಾಗಲು ಇಚ್ಛೆ ಹೊಂದಿರುವುದಾಗಿ ಹೇಳುವ ಅಥವಾ ಇಂಗಿತ ವ್ಯಕ್ತಪಡಿಸುವ; ಅಥವಾ

(ಇ) ಮುದ್ರಣ ಅಥವಾ ವಿದ್ಯುನ್ಮಾನ ಮಾಧ್ಯಮ ಅಥವಾ ಇತರ ಯಾವುದೇ ರೂಪದಲ್ಲಿ ವಾಣಿಜ್ಯಕ ಬಾಡಿಗೆ–ತಾಯ್ತನಕ್ಕೆ ಜಾಹೀರಾತು ಕೊಡುವ

– ಯಾವುದನ್ನೂ ಉತ್ತೇಜಿಸತಕ್ಕದ್ದಲ್ಲ, ಪ್ರಕಟಿಸತಕ್ಕದ್ದಲ್ಲ, ಪ್ರಚಾರ ಮಾಡತಕ್ಕದ್ದಲ್ಲ, ಪ್ರಸಾರ ಮಾಡತಕ್ಕದ್ದಲ್ಲ ಅಥವಾ ಜಾಹೀರಾತು ನೀಡತಕ್ಕದ್ದಲ್ಲ ಅಥವಾ ಉತ್ತೇಜಿಸುವಂತೆ, ಪ್ರಕಟಿಸುವಂತೆ, ಪ್ರಚಾರ ಮಾಡುವಂತೆ, ಪ್ರಸಾರ ಮಾಡುವಂತೆ ಅಥವಾ ಜಾಹೀರಾತು ನೀಡುವಂತೆ ಮಾಡತಕ್ಕದ್ದಲ್ಲ.

(vi) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ, ಮಗು ಬಯಸುವ ದಂಪತಿ ಅಥವಾ ಇತರ ಯಾರೇ ವ್ಯಕ್ತಿಯು, ಬಾಡಿಗೆ–ತಾಯಿಯ ಲಿಖಿತ ಸಮ್ಮತಿಯಿಲ್ಲದೆ ಮತ್ತು ಸಂಬಂಧಪಟ್ಟ ಸಮುಚಿತ ಪ್ರಾಧಿಕಾರದಿಂದ ಈ ಬಗ್ಗೆ ಅಧಿಕೃತತೆ ಪಡೆಯದೆ ಬಾಡಿಗೆ–ತಾಯ್ತನದ ಅವಧಿಯಲ್ಲಿ ಗರ್ಭಪಾತ ನಡೆಸತಕ್ಕದ್ದಲ್ಲ ಅಥವಾ ಗರ್ಭಪಾತಕ್ಕೆ ಕಾರಣವಾಗತಕ್ಕದ್ದಲ್ಲ:

ಪರಂತು, ಸಮುಚಿತ ಪ್ರಾಧಿಕಾರದ ಅಧಿಕೃತತೆಯು ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (1971ರ 34)ರ ಉಪಬಂಧಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅವುಗಳಿಗೆ ಅನುಸಾರವಾಗಿರತಕ್ಕದ್ದು.

(vii) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ, ಮಗು ಬಯಸುವ ದಂಪತಿ ಅಥವಾ ಇತರ ಯಾರೇ ವ್ಯಕ್ತಿಯು ಬಾಡಿಗೆ–ತಾಯ್ತನದ ಉದ್ದೇಶಕ್ಕಾಗಿ ಮಾನವ ಗರ್ಭ ಅಥವಾ ಕೂಟಜೀವಕಣವನ್ನು ಸಂಗ್ರಹಿಸತಕ್ಕದ್ದಲ್ಲ:

ಪರಂತು, ಈ ಖಂಡದಲ್ಲಿರುವುದು ಯಾವುದೂ, ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ರೀತಿಯಲ್ಲಿ ವೀರ್ಯ ಬ್ಯಾಂಕುಗಳು, ಐವಿಎಫ್ ಮತ್ತು ವೈದ್ಯಕೀಯ ಸಂಶೋಧನೆಯಂಥ ಇತರ ಕಾನೂನು ಉದ್ದೇಶಗಳಿಗಾಗಿನ ಅಂಥ ಸಂಗ್ರಹಣೆಗೆ ಬಾಧಕವಾಗತಕ್ಕದ್ದಲ್ಲ;

(viii) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ, ಮಗು ಬಯಸುವ ದಂಪತಿ ಅಥವಾ ಇತರ ಯಾರೇ ವ್ಯಕ್ತಿಯು ಯಾವುದೇ ರೂಪದಲ್ಲಿಯೂ ಬಾಡಿಗೆ–ತಾಯ್ತನಕ್ಕಾಗಿ ಲಿಂಗ ಆಯ್ಕೆ ಪರೀಕ್ಷೆಯನ್ನು ಮಾಡತಕ್ಕದ್ದಲ್ಲ ಅಥವಾ ಮಾಡಲು ಕಾರಣವಾಗತಕ್ಕದ್ದಲ್ಲ.

## ಅಧ್ಯಾಯ III

### ಬಾಡಿಗೆ–ತಾಯ್ತನ ವಿನಿಯಮನ ಮತ್ತು ಬಾಡಿಗೆ–ತಾಯ್ತನದ ಕಾರ್ಯವಿಧಾನಗಳು

**4. ಬಾಡಿಗೆ–ತಾಯ್ತನ ವಿನಿಯಮನ ಮತ್ತು ಬಾಡಿಗೆ–ತಾಯ್ತನದ ಕಾರ್ಯವಿಧಾನಗಳು.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ,–

(i) ಖಂಡ (ii)ರಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳ ಹೊರತುಪಡಿಸಿ ಮತ್ತು ಖಂಡ (iii)ರಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ನೆರವೇರಿಸಿದ ನಂತರ, ಯಾರೇ ವ್ಯಕ್ತಿಯು ಬಾಡಿಗೆ–ತಾಯ್ತನವನ್ನು ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನೆರವೇರಿಸುವುದಕ್ಕಾಗಿ ಬಾಡಿಗೆ–ತಾಯ್ತನ ಚಿಕಿತ್ಸಾಲಯ ಸೇರಿದಂತೆ ಯಾವುದೇ ಸ್ಥಳವನ್ನು ಬಳಸತಕ್ಕದ್ದಲ್ಲ ಅಥವಾ ಬಳಸಲು ಕಾರಣವಾಗತಕ್ಕದ್ದಲ್ಲ;

(ii) ಮುಂದಿನ ಉದ್ದೇಶಗಳ ಹೊರತುಪಡಿಸಿ, ಯಾವುದೇ ಬಾಡಿಗೆ–ತಾಯ್ತನ ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನಡೆಸತಕ್ಕದ್ದಲ್ಲ, ಕೈಗೊಳ್ಳತಕ್ಕದ್ದಲ್ಲ, ನೆರವೇರಿಸತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ, ಎಂದರೆ:–

(ಎ) ಮಗು ಬಯಸುವ ದಂಪತಿಗೆ ಗರ್ಭಧಾರಣೆಯ ಬಾಡಿಗೆ–ತಾಯ್ತನವು ಅಗತ್ಯವಿರುವುದಾಗಿ ವೈದ್ಯಕೀಯ ಸೂಚನೆಯಿರುವುದು:

ಪರಂತು, ಬಾಡಿಗೆ–ತಾಯ್ತನ ಸೌಲಭ್ಯವನ್ನು ಹೊಂದಬಯಸುವಂಥ ಭಾರತೀಯ ಮೂಲದ ದಂಪತಿ ಅಥವಾ ಮಗು ಬಯಸುವ ಮಹಿಳೆಯು, ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮಂಡಲಿಗೆ ಅರ್ಜಿ ಸಲ್ಲಿಸಿ, ಮಂಡಲಿಯಿಂದ ಶಿಫಾರಸ್ಸು ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

**ವಿವರಣೆ.–** ಈ ಉಪಖಂಡದ ಮತ್ತು (iii)ನೇ ಖಂಡದ (ಎ) ಉಪಖಂಡದ ಬಾಬು (I)ರ ಉದ್ದೇಶಗಳಿಗಾಗಿ, "ಗರ್ಭಧಾರಣೆ ಬಾಡಿಗೆ–ತಾಯ್ತನ" ಎಂದರೆ, ಬಾಡಿಗೆ–ತಾಯಿಯು ಮಗು ಬಯಸುವ ದಂಪತಿಗಾಗಿ ತನ್ನ ಗರ್ಭದಲ್ಲಿ ಗರ್ಭವನ್ನು ಅಂತರ್ನಿವೇಶಿಸಿಕೊಳ್ಳುವ ಮುಖಾಂತರ ಮಗುವನ್ನು ಹೆತ್ತು ಕೊಡುವಂಥ ಪದ್ಧತಿಯಾಗಿರುತ್ತದೆ ಮತ್ತು ಮಗುವು ಬಾಡಿಗೆ–ತಾಯಿಯೊಂದಿಗೆ ಆನುವಂಶಿಕವಾಗಿ ಸಂಬಂಧ ಹೊಂದಿರುವುದಿಲ್ಲ.

(ಬಿ) ಇದು, ಸದಾಶಯದ ಬಾಡಿಗೆ–ತಾಯ್ತನ ಉದ್ದೇಶಗಳಿಗಾಗಿ ಮಾತ್ರವಿರುವುದು;

(ಸಿ) ಇದು, ವಾಣಿಜ್ಯಕ ಉದ್ದೇಶಗಳಿಗಾಗಿ ಅಥವಾ ಬಾಡಿಗೆ–ತಾಯ್ತನದ ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ವಾಣಿಜ್ಯೀಕರಣಕ್ಕಾಗಿ ಅಲ್ಲದಿರುವುದು;

(ಡಿ) ಇದು, ಮಾರಾಟ, ವೇಶ್ಯಾವಾಟಿಕೆ ಅಥವಾ ಇತರ ಯಾವುದೇ ರೀತಿಯ ಶೋಷಣೆಗಾಗಿ ಮಕ್ಕಳನ್ನು ಹೆರುವುದಕ್ಕಾಗಿ ಅಲ್ಲದಿರುವುದು;

(ಇ) ಮಂಡಲಿಯು ರಚಿಸಿದ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ಪರಿಸ್ಥಿತಿ ಅಥವಾ ಕಾಯಿಲೆ;

(iii) ಬಾಡಿಗೆ–ತಾಯ್ತನ ಚಿಕಿತ್ಸಾಲಯದ ನಿರ್ದೇಶಕ ಅಥವಾ ಪ್ರಭಾರಿ ಮತ್ತು ಬಾಡಿಗೆ–ತಾಯ್ತನವನ್ನು ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನೆರವೇರಿಸಲು ಅರ್ಹತೆಯುಳ್ಳ ವ್ಯಕ್ತಿಯು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಈ ಮುಂದಿನ ಷರತ್ತುಗಳನ್ನು ಪೂರೈಸಿದ ಹೊರತು, ಬಾಡಿಗೆ–ತಾಯ್ತನ ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನಡೆಸತಕ್ಕದ್ದಲ್ಲ, ಕೈಗೊಳ್ಳತಕ್ಕದ್ದಲ್ಲ, ನೆರವೇರಿಸತಕ್ಕದ್ದಲ್ಲ ಅಥವಾ ಪ್ರಾರಂಭಿಸತಕ್ಕದ್ದಲ್ಲ, ಎಂದರೆ:–

(ಎ) ಸಮುಚಿತ ಪ್ರಾಧಿಕಾರವು ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಈ ಮುಂದಿನ ಷರತ್ತುಗಳನ್ನು ಪೂರೈಸುವ ಬಗ್ಗೆ ತನಗೆ ಮನವರಿಕೆಯಾದ ನಂತರ ನೀಡಿದ ಬಾಡಿಗೆ–ತಾಯ್ತನ ಅವಶ್ಯಕತೆಯ ಪ್ರಮಾಣಪತ್ರವನ್ನು ಮಗು ಬಯಸುವ ದಂಪತಿ ಹೊಂದಿರುವುದು, ಎಂದರೆ:–

(I) ಮಗು ಬಯಸುವ ದಂಪತಿ ಪೈಕಿ ಒಬ್ಬರ ಅಥವಾ ಅವರಿಬ್ಬರ ಪರವಾಗಿ ಅಥವಾ ಮಗು ಬಯಸುವ ಮಹಿಳೆಗೆ, ಗರ್ಭಧಾರಣೆಯ ಬಾಡಿಗೆ–ತಾಯ್ತನವು ಅಗತ್ಯವಿರುವುದಾಗಿ ಜಿಲ್ಲಾ ವೈದ್ಯಕೀಯ ಮಂಡಲಿಯಿಂದ ವೈದ್ಯಕೀಯ ಸೂಚನಾ ಪ್ರಮಾಣಪತ್ರ.

**ವಿವರಣೆ.–** ಈ ಬಾಬಿನ ಉದ್ದೇಶಗಳಿಗಾಗಿ, "ಜಿಲ್ಲಾ ವೈದ್ಯಕೀಯ ಮಂಡಲಿ" ಎಂದರೆ, ಜಿಲ್ಲೆಯ ಮುಖ್ಯ ವೈದ್ಯಾಧಿಕಾರಿ ಅಥವಾ ಮುಖ್ಯ ಸಿವಿಲ್ ಶಸ್ತ್ರಚಿಕಿತ್ಸಕ ಅಥವಾ ಆರೋಗ್ಯ ಸೇವೆಗಳ ಜಂಟಿ ನಿರ್ದೇಶಕ ಅಧ್ಯಕ್ಷನಾಗಿರುವ, ಕನಿಷ್ಠಪಕ್ಷ ಇಬ್ಬರು ಇತರ ತಜ್ಞರನ್ನು ಎಂದರೆ, ಜಿಲ್ಲೆಯ ಮುಖ್ಯ ಸ್ತ್ರೀರೋಗತಜ್ಞ ಅಥವಾ ಪ್ರಸೂತಿವೈದ್ಯ ಮತ್ತು ಮುಖ್ಯ ಮಕ್ಕಳವೈದ್ಯತಜ್ಞರನ್ನು ಒಳಗೊಂಡ ವೈದ್ಯಕೀಯ ಮಂಡಲಿ;

(II) ಬಾಡಿಗೆ–ತಾಯ್ತನದ ಮೂಲಕ ಜನಿಸುವ ಮಗುವಿನ ಪಾಲನೆ ಮತ್ತು ಅಭಿರಕ್ಷೆಗೆ ಸಂಬಂಧಿಸಿದಂತೆ ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆ ಮತ್ತು ಬಾಡಿಗೆ–ತಾಯಿಯು ಸಲ್ಲಿಸಿದ ಅರ್ಜಿಯ ಮೇಲೆ ಪ್ರಥಮ ದರ್ಜೆ ದಂಡಾಧಿಕಾರಿ ಅಥವಾ ಅದಕ್ಕಿಂತ ಮೇಲಿನ ನ್ಯಾಯಾಲಯವು ಹೊರಡಿಸುವ ಮತ್ತು ಅದು ಬಾಡಿಗೆ–ತಾಯ್ತನದ ಮಗು ಜನಿಸಿದ ನಂತರದಲ್ಲಿ ಜನನ ಶಪಥಪತ್ರವಾಗಿರತಕ್ಕ ಆದೇಶ; ಮತ್ತು

(III) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 (1999ರ 41)ರ ಮೇರೆಗೆ ಸ್ಥಾಪಿತವಾದ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರವು, ಮಾನ್ಯ ಮಾಡಿದ ವಿಮಾ ಕಂಪನಿ ಅಥವಾ ಏಜೆಂಟ್‌ರಿಂದ ಬಾಡಿಗೆ–ತಾಯಿಯ ಪ್ರಸವೋತ್ತರದಲ್ಲಿನ ಪ್ರಸವ–ಸಮಸ್ಯೆಗಳನ್ನೂ ಒಳಗೊಳ್ಳುವಂತೆ ಮೂವತ್ತಾರು ತಿಂಗಳ ಅವಧಿಯವರೆಗೆ, ಬಾಡಿಗೆ–ತಾಯಿಯ ಹೆಸರಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೊತ್ತವನ್ನು ಮತ್ತು ಅಂಥ ರೀತಿಯಲ್ಲಿ ಆಕೆಗೆ ಒದಗಿಸಲಾದ ವಿಮೆ;

(ಬಿ) ಬಾಡಿಗೆ–ತಾಯಿಯು ಈ ಮುಂದಿನ ಷರತ್ತುಗಳನ್ನು ಪೂರೈಸಿದ ತರುವಾಯ ಸಮುಚಿತ ಪ್ರಾಧಿಕಾರವು ನೀಡಿರುವ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರುವುದು, ಎಂದರೆ:–

(I) ಈ ಈಗಾಗಲೇ ವಿವಾಹವಾಗಿ, ಸ್ವಂತ ಮಗುವನ್ನು ಹೊಂದಿರುವ ಮತ್ತು ಅಂತರ್ನಿವೇಶನದ ದಿನದಂದು 25 ರಿಂದ 35ರ ನಡುವಿನ ವಯೋಮಾನದಲ್ಲಿರುವ ಮಹಿಳೆಯನ್ನು ಹೊರತುಪಡಿಸಿ, ಯಾರೇ ಮಹಿಳೆಯು, ಬಾಡಿಗೆ–ತಾಯಿಯಾಗತಕ್ಕದ್ದಲ್ಲ ಅಥವಾ ತನ್ನ ಅಂಡ ಅಥವಾ ಅಂಡಾಣು (ಓಅಸೈಟು)ವನ್ನು ದಾನ ಮಾಡುವ ಮೂಲಕ ಅಥವಾ ಅನ್ಯಥಾ ಬಾಡಿಗೆ–ತಾಯ್ತನಕ್ಕೆ ಸಹಾಯ ಮಾಡತಕ್ಕದ್ದಲ್ಲ;

(II) ಇಚ್ಛೆಯುಳ್ಳ ಮಹಿಳೆಯು ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬಾಡಿಗೆ–ತಾಯ್ತನ ಕಾರ್ಯವಿಧಾನಗಳಿಗೆ ಒಳಪಡಲು ಅನುಮತಿಸತಕ್ಕದ್ದು:

ಪರಂತು, ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆಯು, ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸಲು ಒಪ್ಪಿರುವ, ಇಚ್ಛೆ ಹೊಂದಿರುವ ಮಹಿಳೆಯೊಂದಿಗೆ ಸಮುಚಿತ ಪ್ರಾಧಿಕಾರವನ್ನು ಸಂಪರ್ಕಿಸತಕ್ಕದ್ದು;

(III) ಯಾರೇ ಮಹಿಳೆಯು ತನ್ನ ಸ್ವಂತ ಕೂಟಜೀವಕಣಗಳನ್ನು ಒದಗಿಸುವ ಮೂಲಕ ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ;

(IV) ಯಾರೇ ಮಹಿಳೆಯು ತನ್ನ ಜೀವಿತಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಾಡಿಗೆ–ತಾಯಿಯಾಗಿ ಕಾರ್ಯನಿರ್ವಹಿಸತಕ್ಕದ್ದಲ್ಲ:

ಪರಂತು, ಬಾಡಿಗೆ–ತಾಯಿಯ ಕುರಿತು ಕೈಗೊಳ್ಳುವ ಬಾಡಿಗೆ–ತಾಯ್ತನ ಕಾರ್ಯವಿಧಾನಗಳಿಗಾಗಿನ ಪ್ರಯತ್ನಗಳ ಸಂಖ್ಯೆಯು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು; ಮತ್ತು

(V) ನೋಂದಾಯಿತ ವೃತ್ತಿನಿರತ ವೈದ್ಯನಿಂದ ಬಾಡಿಗೆ–ತಾಯ್ತನಕ್ಕಾಗಿ ಮತ್ತು ಬಾಡಿಗೆ–ತಾಯ್ತನ ಕಾರ್ಯವಿಧಾನಗಳಿಗಾಗಿ ವೈದ್ಯಕೀಯ ಮತ್ತು ಮಾನಸಿಕ ಸುಸ್ಥಿರತೆ ಪ್ರಮಾಣಪತ್ರ;

(ಸಿ) ಈ ಮುಂದಿನ ಷರತ್ತುಗಳನ್ನು ಪೂರೈಸಿದ ಮೇಲೆ ಸಮುಚಿತ ಪ್ರಾಧಿಕಾರವು ಮಗು ಬಯಸುವ ದಂಪತಿಗಾಗಿ ಪ್ರತ್ಯೇಕವಾಗಿ ನೀಡಿರುವ ಅರ್ಹತಾ ಪ್ರಮಾಣಪತ್ರ, ಅವುಗಳೆಂದರೆ:–

(I) ಮಗು ಬಯಸುವ ದಂಪತಿಗಳು ವಿವಾಹಿತರಾಗಿದ್ದು, ಪ್ರಮಾಣೀಕರಣದ ದಿನದಂದು ಮಹಿಳೆಯು 23 ರಿಂದ 50ರ ನಡುವಿನ ಮತ್ತು ಪುರುಷನು 26 ರಿಂದ 55ರ ನಡುವಿನ ವಯೋಮಾನದಲ್ಲಿರಬೇಕು;

(II) ಮಗು ಬಯಸುವ ದಂಪತಿಯು ಜೈವಿಕವಾಗಿ ಅಥವಾ ದತ್ತು ಪ್ರಕ್ರಿಯೆ ಮೂಲಕ ಅಥವಾ ಈ ಮುಂಚೆ ಬಾಡಿಗೆ-ತಾಯ್ತನದ ಮೂಲಕ ಯಾವುದೇ ಜೀವಂತ ಮಗುವನ್ನು ಹೊಂದಿರಬಾರದು:

ಪರಂತು, ಈ ಬಾಬುನಲ್ಲಿರುವುದು ಯಾವುದೂ, ಮಾನಸಿಕ ಅಥವಾ ದೈಹಿಕ ವಿಕಲತೆಯನ್ನು ಹೊಂದಿರುವಂಥ ಅಥವಾ ಪ್ರಾಣಾಪಾಯಕಾರಿ ಕಾಯಿಲೆಯಿಂದ ಅಥವಾ ಶಾಶ್ವತವಾಗಿ ಗುಣವಾಗದ ಮಾರಕ ಕಾಯಿಲೆಯಿಂದ ಬಳಲುತ್ತಿರುವಂಥ ಮತ್ತು ಈ ಸಂಬಂಧವಾಗಿ ಜಿಲ್ಲಾ ವೈದ್ಯಕೀಯ ಮಂಡಲಿಯಿಂದ ಸೂಕ್ತ ವೈದ್ಯಕೀಯ ಪ್ರಮಾಣಪತ್ರದೊಂದಿಗೆ ಸಮುಚಿತ ಪ್ರಾಧಿಕಾರವು ಅನುಮೋದಿಸಿರುವಂಥ ಮಗುವನ್ನು ಹೊಂದಿರುವ ಮಗು ಬಯಸುವ ದಂಪತಿಯನ್ನು ಬಾಧಿಸತಕ್ಕದ್ದಲ್ಲ; ಮತ್ತು

(III) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳು.

**5. ಬಾಡಿಗೆ-ತಾಯ್ತನವನ್ನು ಕೈಗೊಳ್ಳುವುದರ ನಿಷೇಧ.-** ಬಾಡಿಗೆ-ತಾಯಿಯ ಸಂಬಂಧಿ ಅಥವಾ ಗಂಡ ಅಥವಾ ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆ ಸೇರಿದಂತೆ ಯಾರೇ ವ್ಯಕ್ತಿಯು 4ನೇ ಪ್ರಕರಣದ (ii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಕ್ಕಾಗಿ ಹೊರತು ಯಾವುದೇ ಬಾಡಿಗೆ-ತಾಯ್ತನವನ್ನು ಅಥವಾ ಬಾಡಿಗೆ-ತಾಯ್ತನ ಕಾರ್ಯವಿಧಾನಗಳನ್ನು ಆಕೆಯ ಮೇಲೆ ನಡೆಸುವಂತೆ ಕೋರತಕ್ಕದ್ದಲ್ಲ ಅಥವಾ ಪ್ರೋತ್ಸಾಹಿಸತಕ್ಕದ್ದಲ್ಲ.

**6. ಬಾಡಿಗೆ-ತಾಯಿಯ ಲಿಖಿತ ಸೂಚಿತ ಸಮ್ಮತಿ.-** (1) ಯಾರೇ ವ್ಯಕ್ತಿಯು,-

(i) ಸಂಬಂಧಪಟ್ಟ ಬಾಡಿಗೆ-ತಾಯಿಗೆ ಬಾಡಿಗೆ-ತಾಯ್ತನ ಕಾರ್ಯವಿಧಾನಗಳ ಎಲ್ಲಾ ಸಾಧ್ಯಂತ ಅಡ್ಡ ಪರಿಣಾಮಗಳು ಮತ್ತು ಆನಂತರದ ಪರಿಣಾಮಗಳನ್ನು ವಿವರಿಸಿದ ಹೊರತು; ಮತ್ತು

(ii) ಅಂಥ ಕಾರ್ಯವಿಧಾನಗಳಿಗೆ ಒಳಪಡಲು ಬಾಡಿಗೆ-ತಾಯಿಗೆ ಅರ್ಥವಾಗುವ ಭಾಷೆಯಲ್ಲಿ, ನಿರ್ದಿಷ್ಟ ನಮೂನೆಯಲ್ಲಿ ಆಕೆಯಿಂದ ಲಿಖಿತ ಸೂಚಿತ ಸಮ್ಮತಿಯನ್ನು ಪಡೆದ ಹೊರತು

- ಅಂಥ ಕಾರ್ಯವಿಧಾನಗಳನ್ನು ಕೋರತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಬಾಡಿಗೆ-ತಾಯಿಯು ತನ್ನ ಗರ್ಭದಲ್ಲಿ ಮಾನವ ಗರ್ಭವನ್ನು ಅಂತರ್ನಿವೇಶಿಸುವ ಪೂರ್ವದಲ್ಲಿ, ಬಾಡಿಗೆ-ತಾಯ್ತನಕ್ಕಾಗಿ ತಾನು ನೀಡಿರುವ ಸಮ್ಮತಿಯನ್ನು ಹಿಂಪಡೆಯುವ ಆಯ್ಕೆಯನ್ನು ಹೊಂದಿರತಕ್ಕದ್ದು.

**7. ಬಾಡಿಗೆ-ತಾಯ್ತನದ ಮೂಲಕ ಜನಿಸಿದ ಮಗುವನ್ನು ಪರಿತ್ಯಜಿಸುವುದಕ್ಕೆ ನಿಷೇಧ.-** ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆಯು, ಬಾಡಿಗೆ-ತಾಯ್ತನ ಕಾರ್ಯವಿಧಾನದ ಮೂಲಕ ಭಾರತದಲ್ಲಿಯಾಗಲೀ ಅಥವಾ ಹೊರದೇಶದಲ್ಲಿಯಾಗಲೀ ಜನಿಸಿದ ಮಗುವನ್ನು ಯಾವುದೇ ಆನುವಂಶಿಕ ನ್ಯೂನತೆ, ಜನನ ನ್ಯೂನತೆ, ಇತರ ಯಾವುದೇ ವೈದ್ಯಕೀಯ ಸ್ಥಿತಿ, ಆನಂತರ ಬೆಳೆಯುವ ನ್ಯೂನತೆಗಳು, ಮಗುವಿನ ಲಿಂಗ ಅಥವಾ ಒಂದಕ್ಕಿಂತ ಹೆಚ್ಚು ಮಕ್ಕಳಿಗೆ ಗರ್ಭಧರಿಸಿರುವಿಕೆ ಇವೇ ಮೊದಲಾದ ಕಾರಣಗಳೂ ಸೇರಿದಂತೆ, ಆದರೆ ಈ ಕಾರಣಗಳಿಗೆ ಸೀಮಿತವಾಗಿರದ ಯಾವುದೇ ಕಾರಣಕ್ಕಾಗಿಯೂ ಪರಿತ್ಯಜಿಸತಕ್ಕದ್ದಲ್ಲ.

**8. ಬಾಡಿಗೆ-ತಾಯ್ತನದ ಮಗುವಿನ ಹಕ್ಕುಗಳು.-** ಬಾಡಿಗೆ-ತಾಯ್ತನ ಕಾರ್ಯವಿಧಾನದಿಂದ ಜನಿಸಿದ ಮಗುವು, ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆಯ ಜೈವಿಕ ಮಗುವಾಗಿ ಭಾವಿಸತಕ್ಕದ್ದು ಮತ್ತು ಸದರಿ ಮಗುವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೈಸರ್ಗಿಕ ಮಗುವಿಗೆ ಲಭ್ಯವಿರುವ ಎಲ್ಲಾ ಹಕ್ಕುಗಳು ಮತ್ತು ವಿಶೇಷ ಪ್ರಯೋಜನಗಳಿಗೆ ಹಕ್ಕುಳ್ಳದ್ದಾಗಿರತಕ್ಕದ್ದು.

**9. ಅಂತರ್ನಿವೇಶಿಸಬೇಕಾದ ಅಂಡಾಶಯಕಣಗಳ ಅಥವಾ ಮಾನವ ಭ್ರೂಣಗಳ ಸಂಖ್ಯೆ.–** ಬಾಡಿಗೆ–ತಾಯ್ತನದ ಉದ್ದೇಶಕ್ಕಾಗಿ ಬಾಡಿಗೆ–ತಾಯಿಯ ಗರ್ಭಕೋಶದಲ್ಲಿ ಅಂತರ್ನಿವೇಶಿಸಬೇಕಾದ ಅಂಡಾಶಯಕಣ (ಓಅಸೈಟು)ಗಳು ಅಥವಾ ಮಾನವ ಭ್ರೂಣಗಳ ಸಂಖ್ಯೆಯು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**10. ಗರ್ಭಪಾತದ ನಿಷೇಧ.–** ಗೊತ್ತುಪಡಿಸಬಹುದಾದಂಥ ಷರತ್ತುಗಳನ್ನು ಹೊರತುಪಡಿಸಿ ಯಾರೇ ವ್ಯಕ್ತಿ, ಸಂಸ್ಥೆ, ಬಾಡಿಗೆ–ತಾಯ್ತನ ಚಿಕಿತ್ಸಾಲಯ, ಪ್ರಯೋಗಾಲಯ ಅಥವಾ ಯಾವುದೇ ರೀತಿಯ ಚಿಕಿತ್ಸಾ ಕಾರ್ಯಸಂಸ್ಥೆಯು, ಬಾಡಿಗೆ–ತಾಯ್ತನದ ಯಾವುದೇ ಹಂತದಲ್ಲಿ ಗರ್ಭಪಾತ ಮಾಡಿಸಿಕೊಳ್ಳುವಂತೆ ಬಾಡಿಗೆ–ತಾಯಿಯನ್ನು ಒತ್ತಾಯಪಡಿಸತಕ್ಕದ್ದಲ್ಲ.

## ಅಧ್ಯಾಯ IV

## ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ನೋಂದಣಿ

**11. ಬಾಡಿಗೆ–ತಾಯ್ತನದ ಚಿಕಿತ್ಸಾಲಯಗಳ ನೋಂದಣಿ.–** (1) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಯುಕ್ತವಾಗಿ ಬಾಡಿಗೆ–ತಾಯ್ತನದ ಚಿಕಿತ್ಸಾಲಯವನ್ನು ನೋಂದಾಯಿಸಿದ್ದ ಹೊರತು, ಬಾಡಿಗೆ–ತಾಯ್ತನವನ್ನು ಕೈಗೊಳ್ಳುವುದಕ್ಕಾಗಿ ಅಥವಾ ಯಾವುದೇ ರೂಪದ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನಡೆಸುವುದಕ್ಕಾಗಿ ಅಂಥ ಯಾವುದೇ ಚಿಕಿತ್ಸಾಲಯವನ್ನು ಸ್ಥಾಪಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗೆ ಪ್ರತಿಯೊಂದು ನೋಂದಣಿ ಅರ್ಜಿಯನ್ನು ನಿಯಮಿಸಬಹುದಾದಂಥ ಶುಲ್ಕದೊಂದಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಮುಚಿತ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(3) 4ನೇ ಪ್ರಕರಣದ ಖಂಡ (ii)ರಲ್ಲಿ ಉಲ್ಲೇಖಿಸಲಾದಂತೆ, ಬಾಡಿಗೆ–ತಾಯ್ತನವನ್ನು ಅಥವಾ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ಭಾಗಶಃ ಅಥವಾ ಸಂಪೂರ್ಣವಾಗಿ ನಡೆಸುವಂಥ ಪ್ರತಿ ಬಾಡಿಗೆ–ತಾಯ್ತನ ಚಿಕಿತ್ಸಾಲಯವು, ಸಮುಚಿತ ಪ್ರಾಧಿಕಾರವನ್ನು ನೇಮಕ ಮಾಡಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ, ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು:

ಪರಂತು, ಅಂಥ ಚಿಕಿತ್ಸಾಲಯವು ನೋಂದಣಿ ಕೋರಿ ಅರ್ಜಿ ಸಲ್ಲಿಸಿರುವ ಮತ್ತು ಪ್ರತ್ಯೇಕವಾಗಿ ಹಾಗೆ ನೋಂದಾಯಿತವಾಗಿರುವ ಹೊರತು ಅಥವಾ ಅಂಥ ಅರ್ಜಿಯು ವಿಲೆಯಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಈ ಅಧಿನಿಯಮವು ಜಾರಿಯಾದ ದಿನಾಂಕದಿಂದ ಆರು ತಿಂಗಳು ಮುಗಿದ ಮೇಲೆ ಅಂಥ ಯಾವುದೇ ಸಮಾಲೋಚನೆಯನ್ನು ಅಥವಾ ಕಾರ್ಯವಿಧಾನಗಳನ್ನು ಕೈಗೊಳ್ಳುವುದು ನಿಂತುಹೋಗತಕ್ಕದ್ದು.

(4) ನಿಯಮಿಸಬಹುದಾದಂಥ ಸೌಕರ್ಯಗಳನ್ನು ಒದಗಿಸಲು ಮತ್ತು ತಜ್ಞ ಮಾನವಬಲ, ಭೌತಿಕ ಮೂಲಸೌಕರ್ಯ ಮತ್ತು ರೋಗಪತ್ತೆ ಸೌಕರ್ಯಗಳೂ ಸೇರಿದಂತೆ ಅಂಥ ಸಾಧನಗಳು ಮತ್ತು ಮಾನದಂಡಗಳನ್ನು ನಿರ್ವಹಿಸಲು ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯವು ಶಕ್ತವಿರುವುದಾಗಿ ಸಮುಚಿತ ಪ್ರಾಧಿಕಾರಕ್ಕೆ ಮನವರಿಕೆಯಾದ ಹೊರತು, ಈ ಅಧಿನಿಯಮದ ಮೇರೆಗೆ ಯಾವುದೇ ಅಂಥ ಬಾಡಿಗೆ–ತಾಯ್ತನ ಚಿಕಿತ್ಸಾಲಯವನ್ನು ನೋಂದಾಯಿಸತಕ್ಕದ್ದಲ್ಲ.

**12. ನೋಂದಣಿ ಪ್ರಮಾಣಪತ್ರ.–** (1) ಸಮುಚಿತ ಪ್ರಾಧಿಕಾರವು, ವಿಚಾರಣೆಯನ್ನು ಕೈಗೊಂಡ ನಂತರ ಮತ್ತು ಅರ್ಜಿದಾರನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಎಲ್ಲಾ ಅಗತ್ಯತೆಗಳನ್ನು ಪಾಲಿಸಿದ್ದಾನೆಂದು ತನಗೆ ಮನದಟ್ಟಾದ ನಂತರ, ತಾನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಶುಲ್ಕ ಸಂದಾಯದ ನಂತರ ಬಾಡಿಗೆ–ತಾಯ್ತನ ಚಿಕಿತ್ಸಾಲಯಕ್ಕೆ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

(2) ವಿಚಾರಣೆ ಮಾಡಿದ ನಂತರ ಮತ್ತು ಅರ್ಜಿದಾರನಿಗೆ ಅಹವಾಲವನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ, ಸಮುಚಿತ ಪ್ರಾಧಿಕಾರಕ್ಕೆ, ಅರ್ಜಿದಾರನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳ

ಅಗತ್ಯತೆಗಳನ್ನು ಪಾಲಿಸಿಲ್ಲವೆಂಬುದಾಗಿ ಮನದಟ್ಟಾದಲ್ಲಿ, ಅದು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ನೋಂದಣಿ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(3) ಪ್ರತಿಯೊಂದು ನೋಂದಣಿ ಪ್ರಮಾಣಪತ್ರವು ಮೂರು ವರ್ಷಗಳ ಅವಧಿಗಾಗಿ ಊರ್ಜಿತವಾಗಿರತಕ್ಕದ್ದು ಮತ್ತು ನಿಯಮಿಸಬಹುದಾದ ರೀತಿಯಲ್ಲಿ ಮತ್ತು ಅಂಥ ಶುಲ್ಕ ಸಂದಾಯದ ನಂತರ ನವೀಕರಣಗೊಳ್ಳತಕ್ಕದ್ದು.

(4) ಬಾಡಿಗೆ–ತಾಯ್ತನ ಚಿಕಿತ್ಸಾಲಯವು ನೋಂದಣಿ ಪ್ರಮಾಣಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**13. ನೋಂದಣಿಯ ರದ್ದಿಯಾತಿ ಅಥವಾ ಅಮಾನತು.–** (1) ಸಮುಚಿತ ಪ್ರಾಧಿಕಾರವು ಸ್ವಯಂಪ್ರೇರಿತವಾಗಿ ಅಥವಾ ದೂರನ್ನು ಸ್ವೀಕರಿಸಿದ ನಂತರ, ನೋಟೀಸಿನಲ್ಲಿ ನಮೂದಿಸಲಾದ ಕಾರಣಗಳಿಗಾಗಿ ನೋಂದಣಿಯನ್ನು ಯಾಕೆ ರದ್ದುಮಾಡಬಾರದು ಅಥವಾ ಅಮಾನತುಗೊಳಿಸಬಾರದೆಂದು ಕಾರಣ ಕೇಳಿ ಬಾಡಿಗೆ–ತಾಯ್ತನ ಚಿಕಿತ್ಸಾಲಯಕ್ಕೆ ನೋಟೀಸನ್ನು ನೀಡಬಹುದು.

(2) ಬಾಡಿಗೆ–ತಾಯ್ತನ ಚಿಕಿತ್ಸಾಲಯಕ್ಕೆ ಅಹವಾಲವನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ನಂತರ, ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಉಲ್ಲಂಘನೆಯಾಗಿದೆಯೆಂದು ಸಮುಚಿತ ಪ್ರಾಧಿಕಾರಕ್ಕೆ ಮನದಟ್ಟಾದಲ್ಲಿ, ಅಂಥ ಚಿಕಿತ್ಸಾಲಯದ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಅಪರಾಧಿಕ ಕ್ರಮಕ್ಕೆ ಬಾಧಕವಾಗದಂತೆ, ಸಂದರ್ಭಾನುಸಾರ, ಅದು ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗಾಗಿ ಅದರ ನೋಂದಣಿಯನ್ನು ಅಮಾನತು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಸಮುಚಿತ ಪ್ರಾಧಿಕಾರವು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯ ಅಥವಾ ವಿಹಿತವೆಂದು ಅಭಿಪ್ರಾಯಪಟ್ಟಲ್ಲಿ, ತಾನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, (1)ನೇ ಉಪಪ್ರಕರಣದ ಮೇರೆಗೆ ಯಾವುದೇ ನೋಟೀಸನ್ನು ನೀಡದೆಯೇ ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯದ ನೋಂದಣಿಯನ್ನು ಅಮಾನತುಗೊಳಿಸಬಹುದು.

**14. ಅಪೀಲು.–** ಬಾಡಿಗೆ–ತಾಯ್ತನ ಚಿಕಿತ್ಸಾಲಯ ಅಥವಾ ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆಯು, 13ನೇ ಪ್ರಕರಣದ ಮೇರೆಗೆ ಸಮುಚಿತ ಪ್ರಾಧಿಕಾರವು ಅರ್ಜಿಯನ್ನು ತಿರಸ್ಕರಿಸಿ ಅಥವಾ ತಾನು ಮಾಡಿದ ನೋಂದಣಿಯನ್ನು ಅಮಾನತುಗೊಳಿಸಿ ಅಥವಾ ರದ್ದುಗೊಳಿಸಿ ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದಂತೆ ಸೂಚನಾ ಪತ್ರವನ್ನು ಮತ್ತು 4ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರಗಳನ್ನು ತಿರಸ್ಕರಿಸಿರುವುದಕ್ಕೆ ಸಂಬಂಧಿಸಿದ ಸೂಚನಾ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಅಂಥ ಆದೇಶದ ವಿರುದ್ಧ,–

(ಎ) ರಾಜ್ಯ ಸಮುಚಿತ ಪ್ರಾಧಿಕಾರ ಹೊರಡಿಸಿರುವ ಆದೇಶದ ವಿರುದ್ಧದ ಅಪೀಲು ಆಗಿರುವ ಸಂದರ್ಭದಲ್ಲಿ, ರಾಜ್ಯ ಸರ್ಕಾರಕ್ಕೆ;

(ಬಿ) ಕೇಂದ್ರಾಡಳಿತ ಪ್ರದೇಶದ ಸಮುಚಿತ ಪ್ರಾಧಿಕಾರ ಹೊರಡಿಸಿರುವ ಆದೇಶದ ವಿರುದ್ಧದ ಅಪೀಲು ಆಗಿರುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರಕ್ಕೆ

– ನಿಯಮಿಸಬಹುದಾದ ರೀತಿಯಲ್ಲಿ ಅಪೀಲನ್ನು ಸಲ್ಲಿಸಬಹುದು.

**15. ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ರಿಜಿಸ್ಟ್ರಿಯ ಸ್ಥಾಪನೆ.–** ಈ ಅಧಿನಿಯಮದ ಮೇರೆಗೆ ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ನೋಂದಣಿ ಉದ್ದೇಶಗಳಿಗಾಗಿ ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ರಿಜಿಸ್ಟ್ರಿ ಎಂದು ಕರೆಯಲಾಗುವ ರಿಜಿಸ್ಟ್ರಿಯನ್ನು ಸ್ಥಾಪಿಸತಕ್ಕದ್ದು.

**16. ರಾಷ್ಟ್ರೀಯ ರಿಜಿಸ್ಟ್ರಿಗೆ ಸಂಬಂಧಿಸಿದಂತೆ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದ ಉಪಬಂಧಗಳ ಅನ್ವಯ.–** 15ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಮತ್ತು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದ 9ನೇ ಪ್ರಕರಣದ

ಮೇರೆಗೆ ಸ್ಥಾಪಿಸಬೇಕಾದ ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ರಿಜಿಸ್ಟ್ರಿಯು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಷ್ಟ್ರೀಯ ರಿಜಿಸ್ಟ್ರಿಯಾಗಿರತಕ್ಕದ್ದು ಮತ್ತು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದ ಮೇರೆಗೆ ಸದರಿ ರಿಜಿಸ್ಟ್ರಿಯು ನಿರ್ವಹಿಸಬೇಕಾದ ಕಾರ್ಯಗಳು ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ V

## ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿ ಮತ್ತು ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿಗಳು

**17. ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ** ಮಂಡಲಿಯ **ರಚನೆ.-** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಮಂಡಲಿಗೆ ಪ್ರದತ್ತವಾಗುವ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ-ತಾಯ್ತನ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಲಿಯು, ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಪ್ರಭಾರದಲ್ಲಿರುವ ಮಂತ್ರಿ, ಅಧ್ಯಕ್ಷ, ಪದನಿಮಿತ್ತ;

(ಬಿ) ಬಾಡಿಗೆ-ತಾಯ್ತನ ವಿಷಯದೊಂದಿಗೆ ವ್ಯವಹರಿಸುವ ಇಲಾಖೆಯ ಪ್ರಭಾರದಲ್ಲಿರುವ, ಭಾರತ ಸರ್ಕಾರದ ಕಾರ್ಯದರ್ಶಿ, ಉಪಾಧ್ಯಕ್ಷ, ಪದನಿಮಿತ್ತ;

(ಸಿ) ಮೂವರು ಮಹಿಳಾ ಸಂಸದರು, ಈ ಪೈಕಿ ಇಬ್ಬರು ಲೋಕಸಭೆಯಿಂದ, ಒಬ್ಬರು ರಾಜ್ಯ ಸಭೆಯಿಂದ ಚುನಾಯಿತರಾಗಿರತಕ್ಕದ್ದು, ಸದಸ್ಯರು, ಪದನಿಮಿತ್ತ;

(ಡಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಾನೂನು ಮತ್ತು ನ್ಯಾಯ ಮಂತ್ರಾಲಯದಲ್ಲಿನ ವಿಧಾಯೀ ವಿಭಾಗದ ಮತ್ತು ಗೃಹ ವ್ಯವಹಾರಗಳ ಮಂತ್ರಾಲಯದ ಪ್ರಭಾರದಲ್ಲಿರುವ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದಂಥ ಕೇಂದ್ರ ಸರ್ಕಾರದ ಮಂತ್ರಾಲಯಗಳ ಮೂವರು ಸದಸ್ಯರು, ಪದನಿಮಿತ್ತ;

(ಇ) ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ ಮಹಾನಿರ್ದೇಶಕ, ಸದಸ್ಯ, ಪದನಿಮಿತ್ತ;

(ಎಫ್) ನಿಯಮಿಸಬಹುದಾದಂಥ ರೀತಿಯಲ್ಲಿ ಕೇಂದ್ರ ಸರ್ಕಾರವು ನೇಮಿಸಬೇಕಾದ ಹತ್ತು ತಜ್ಞ ಸದಸ್ಯರು ಮತ್ತು ಆ ಪೈಕಿ ನಿಯಮಿಸಬಹುದಾದಂಥ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರುವ ಕೆಳಕಂಡ ಕ್ಷೇತ್ರಗಳಿಂದ ತಲಾ ಇಬ್ಬರು,-

(i) ಖ್ಯಾತ ವೈದ್ಯಕೀಯ ತಳಿವಿಜ್ಞಾನಿ ಅಥವಾ ಭ್ರೂಣತಜ್ಞರು;

(ii) ಖ್ಯಾತ ಸ್ತ್ರೀರೋಗತಜ್ಞರು ಮತ್ತು ಪ್ರಸೂತಿತಜ್ಞರು;

(iii) ಖ್ಯಾತ ಸಮಾಜ ವಿಜ್ಞಾನಿಗಳು;

(iv) ಮಹಿಳಾ ಕಲ್ಯಾಣ ಸಂಘ-ಸಂಸ್ಥೆಗಳ ಪ್ರತಿನಿಧಿಗಳು; ಮತ್ತು

(v) ಮಹಿಳಾ ಆರೋಗ್ಯ ಮತ್ತು ಮಕ್ಕಳ ವಿಷಯಗಳಲ್ಲಿ ಕೆಲಸ ಮಾಡುತ್ತಿರುವ ನಾಗರಿಕ ಸಮಾಜದ ಪ್ರತಿನಿಧಿಗಳು;

(ಜಿ) ಅಕ್ಷರಾನುಕ್ರಮದಲ್ಲಿ ಇಬ್ಬರನ್ನು ಮತ್ತು ವ್ಯತಿರಿಕ್ತ ಅಕ್ಷರಾನುಕ್ರಮದಲ್ಲಿ ಇಬ್ಬರನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಸರದಿಯ ಮೂಲಕ ಕೇಂದ್ರ ಸರ್ಕಾರವು ನಾಮನಿರ್ದೇಶಿಸುವ ರಾಜ್ಯ ಮಂಡಲಿಗಳ ನಾಲ್ವರು ಅಧ್ಯಕ್ಷರು, ಸದಸ್ಯರು, ಪದನಿಮಿತ್ತ; ಮತ್ತು

(ಹೆಚ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಬಾಡಿಗೆ-ತಾಯ್ತನ ವಿಭಾಗದ ಪ್ರಭಾರದಲ್ಲಿರುವ ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಒಬ್ಬ ಅಧಿಕಾರಿ, ಸದಸ್ಯ-ಕಾರ್ಯದರ್ಶಿ, ಪದನಿಮಿತ್ತ.

**18. ಸದಸ್ಯರ ಪದಾವಧಿ.–** (1) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಸದಸ್ಯನ ಪದಾವಧಿಯು,–

(ಎ) 17ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡ (ಸಿ)ನ ಮೇರೆಗೆ ಮತದಾನದ ಸಂದರ್ಭದಲ್ಲಿ, ಮೂರು ವರ್ಷಗಳಾಗಿರತಕ್ಕದ್ದು:

ಪರಂತು, ಅಂಥ ಸದಸ್ಯನು, ಮಂತ್ರಿ, ರಾಜ್ಯ ಮಂತ್ರಿ ಅಥವಾ ಉಪಮಂತ್ರಿ ಅಥವಾ ಲೋಕಸಭೆಯ ಸಭಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಅಥವಾ ರಾಜ್ಯ ಸಭೆಯ ಉಪಸಭಾಪತಿಯಾದ ಕೂಡಲೇ ಅಥವಾ ಅವನು ಯಾವ ಸದನದಿಂದ ಆಯ್ಕೆಗೊಂಡನೋ ಆ ಸದನದ ಸದಸ್ಯತ್ವ ರದ್ದುಗೊಂಡ ಕೂಡಲೇ ಅವನ ಪದಾವಧಿ ಮುಕ್ತಾಯಗೊಳ್ಳತಕ್ಕದ್ದು; ಮತ್ತು

(ಬಿ) 17ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡ (ಎಫ್)ನ ಮೇರೆಗೆ ನೇಮಕಗೊಂಡಿರುವ ಸಂದರ್ಭದಲ್ಲಿ, ಮೂರು ವರ್ಷಗಳಾಗಿರತಕ್ಕದ್ದು:

ಪರಂತು ಈ ಖಂಡದ ಮೇರೆಗೆ ಸದಸ್ಯನಾಗಿ ನೇಮಕಗೊಳ್ಳುವ ವ್ಯಕ್ತಿಯು ನಿಯಮಿಸಬಹುದಾದಂಥ ವಯೋಮಾನದವನಾಗಿರತಕ್ಕದ್ದು.

(2) ಆತನ ಮರಣ, ರಾಜೀನಾಮೆಯ ಕಾರಣದಿಂದಾಗಿ ಅಥವಾ ಅನಾರೋಗ್ಯ ಅಥವಾ ಇತರ ಅಸಾಮರ್ಥ್ಯದಿಂದ ಅವನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿನ ಅಸಮರ್ಥತೆ ಕಾರಣದಿಂದಾಗಿ ಪದದಲ್ಲಿ ಉಂಟಾಗುವ ಯಾವುದೇ ಖಾಲಿ ಪದವನ್ನು ಕೇಂದ್ರ ಸರ್ಕಾರವು, ಅಂಥ ಪದವು ಖಾಲಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಹೊಸದಾಗಿ ನೇಮಕ ಮಾಡಿಕೊಳ್ಳುವ ಮೂಲಕ ಭರ್ತಿಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಸದಸ್ಯನು, ಅವನು ಯಾರ ಸ್ಥಾನದಲ್ಲಿ ಹಾಗೆ ನೇಮಕಗೊಂಡಿರುತ್ತಾನೋ ಅಂಥವನ ಉಳಿದ ಪದಾವಧಿವರೆಗೆ ಪದದಲ್ಲಿರತಕ್ಕದ್ದು.

(3) ಉಪಾಧ್ಯಕ್ಷನು ಕಾಲಕಾಲಕ್ಕೆ ಅಧ್ಯಕ್ಷನು ಆತನಿಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**19. ಮಂಡಲಿಯ ಸಭೆಗಳು.–** (1) ಮಂಡಲಿಯು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಕಾಲಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಯ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಒಳಗೊಂಡಂತೆ) ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

ಪರಂತು, ಮಂಡಲಿಯು ಕನಿಷ್ಠ ಪಕ್ಷ ಆರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಮಂಡಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಮಂಡಲಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಮಂಡಲಿಯ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತದಾನ ಮಾಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಹಾಗೂ ಮತಗಳು ಸಮ-ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ, ಸಭೆಯ ಅಧ್ಯಕ್ಷತೆ ವಹಿಸಿರುವ ಉಪಾಧ್ಯಕ್ಷನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರು, ಮಂಡಲಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ, ಪ್ರಯಾಣಕ್ಕೆ ತಗುಲಿದ ವೆಚ್ಚಗಳನ್ನು ಮಾತ್ರ ಸ್ವೀಕರಿಸತಕ್ಕದ್ದು.

**20. ಖಾಲಿಹುದ್ದೆ, ಮುಂತಾದವುಗಳಿಂದ, ಮಂಡಲಿಯ ವ್ಯವಹರಣೆಗಳು ಅಸಿಂಧುವಾಗದಿರುವುದು.–** ಮಂಡಲಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಮಂಡಲಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ; ಅಥವಾ

(ಬಿ) ಮಂಡಲಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನತೆ; ಅಥವಾ

(ಸಿ) ಮಂಡಲಿಯ ಕಾರ್ಯವಿಧಾನದಲ್ಲಿ, ಮೊಕದ್ದಮೆಯ ಗುಣಾರ್ಹತೆಗಳಿಗೆ ಬಾಧಕವಾಗದಂಥ, ಯಾವುದೇ ಅಕ್ರಮತೆಯ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**21. ಸದಸ್ಯನಾಗಿ ನೇಮಕವಾಗುವುದಕ್ಕಾಗಿ ಅನರ್ಹತೆಗಳು.–** (1) ವ್ಯಕ್ತಿಯು,–

(ಎ) ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ಆತನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ; ಅಥವಾ

(ಇ) ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮ ಉಂಟುಮಾಡುವಂತೆ ತನ್ನ ಪದದಲ್ಲಿ ಮುಂದುವರಿಯುವುದಕ್ಕಾಗಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ;

(ಎಫ್) ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳನ್ನು ಪ್ರತಿನಿಧಿಸುವಂಥ ಯಾವುದೇ ಸಂಘದ ಕಾರ್ಯನಿರತ ಸದಸ್ಯ ಅಥವಾ ಪದಾಧಿಕಾರಿಯಾಗಿದ್ದು, ಸದಸ್ಯನಾಗಿ ಆತನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ; ಅಥವಾ

(ಜಿ) ಬಾಡಿಗೆ–ತಾಯ್ತನ ಅಥವಾ ಬಂಜೆತನ ಕುರಿತಾಗಿ ವಾಣಿಜ್ಯಕ ಆಸಕ್ತಿ ಹೊಂದಿರುವಂಥ ಯಾವುದೇ ವೃತ್ತಿಪರ ನಿಕಾಯಗಳನ್ನು ಮುನ್ನಡೆಸುವ ಅಥವಾ ಪ್ರತಿನಿಧಿಸುವ ಪದಾಧಿಕಾರಿಯಾಗಿದ್ದರೆ

– ಸದಸ್ಯನಾಗಿ ಆಯ್ಕೆಗೊಳ್ಳುವುದಕ್ಕೆ ಮತ್ತು ಸದಸ್ಯನಾಗಿ ಮುಂದುವರಿಯುವುದಕ್ಕೆ ಅನರ್ಹನಾಗಿರತಕ್ಕದ್ದು.

(2) 17ನೇ ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯರನ್ನು, ಕೇಂದ್ರ ಸರ್ಕಾರವು ತಾನು ಈ ಬಗ್ಗೆ ನಿಯಮಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಚಾರಣೆ ನಡೆಸಿದ ಮೇಲೆ, ಅಂಥ ಸದಸ್ಯರ ದುರ್ವರ್ತನೆ ಅಥವಾ ಅಸಾಮರ್ಥ್ಯವು ಸಾಬೀತಾದ ಆಧಾರದ ಮೇಲೆ ಅಂಥ ಸದಸ್ಯರನ್ನು ಅಂಥ ಯಾವುದೇ ಕಾರಣಕ್ಕಾಗಿ ತೆಗೆದುಹಾಕಬೇಕೆಂಬ ನಿರ್ಣಯಕ್ಕೆ ಬಂದ ನಂತರ, ಕೇಂದ್ರ ಸರ್ಕಾರವು ಈ ಸಂಬಂಧವಾಗಿ ಆದೇಶ ಹೊರಡಿಸಿದ ಹೊರತು, ಅವರನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಯಾವ ಸದಸ್ಯನ ವಿರುದ್ಧ (2)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ಪ್ರಾರಂಭಿಸಲಾಗುತ್ತಿದೆಯೋ ಅಥವಾ ಬಾಕಿಯಿದೆಯೋ ಅಂಥ ಯಾರೇ ಸದಸ್ಯನನ್ನು ಕೇಂದ್ರ ಸರ್ಕಾರವು ವಿಚಾರಣಾ ವರದಿಯನ್ನು ಸ್ವೀಕರಿಸಿ, ಆದೇಶವನ್ನು ಹೊರಡಿಸುವವರೆಗೆ ಅಮಾನತುಗೊಳಿಸಬಹುದು.

**22. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯು ತಾತ್ಕಾಲಿಕವಾಗಿ ವ್ಯಕ್ತಿಗಳನ್ನು ಸೇರಿಸಿಕೊಳ್ಳುವುದು.–** (1) ಮಂಡಲಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವ ವ್ಯಕ್ತಿಯ ನೆರವು ಅಥವಾ ಸಲಹೆಯನ್ನು ಅಪೇಕ್ಷಿಸಬಹುದೋ ಅಂಥ ವ್ಯಕ್ತಿಯನ್ನು ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ತನ್ನೊಂದಿಗೆ ಸೇರಿಸಿಕೊಳ್ಳಬಹುದು.

(2) ಉಪಪ್ರಕರಣ (1)ರ ಮೇರೆಗೆ ಮಂಡಲಿಯೊಂದಿಗೆ ಸೇರಿರುವ ವ್ಯಕ್ತಿಯು ಆ ಉದ್ದೇಶಕ್ಕೆ ಸಂಬಂಧಪಟ್ಟ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಹಕ್ಕು ಹೊಂದಿರತಕ್ಕದ್ದು, ಆದರೆ ಮಂಡಲಿಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕದ್ದಲ್ಲ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕದ್ದಲ್ಲ.

**23. ಮಂಡಲಿಯ ಆದೇಶಗಳು ಮತ್ತು ಇತರ ಲಿಖಿತಪತ್ರಗಳ ಪ್ರಮಾಣೀಕರಣ.–** ಮಂಡಲಿಯ ಎಲ್ಲಾ ಆದೇಶಗಳು ಮತ್ತು ನಿರ್ಣಯಗಳನ್ನು ಅಧ್ಯಕ್ಷನ ಸಹಿಯ ಮೂಲಕ ಪ್ರಮಾಣೀಕರಿಸತಕ್ಕದ್ದು ಮತ್ತು ಮಂಡಲಿ ಹೊರಡಿಸಿದ ಇತರ ಎಲ್ಲಾ ಲಿಖಿತಪತ್ರಗಳನ್ನು ಮಂಡಲಿಯ ಸದಸ್ಯ–ಕಾರ್ಯದರ್ಶಿಯ ಸಹಿಯ ಮೂಲಕ ಪ್ರಮಾಣೀಕರಿಸತಕ್ಕದ್ದು.

**24. ಮರು–ನೇಮಕಾತಿಗಾಗಿ ಸದಸ್ಯನ ಅರ್ಹತೆ.–** ಸದಸ್ಯನಾಗಿರುವುದು ನಿಂತುಹೋಗುವ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅಂಥ ಸದಸ್ಯನಾಗಿ ಮರು–ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು:

ಪರಂತು, ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿದ ಯಾರೇ ಸದಸ್ಯನು ನಿರಂತರ ಎರಡು ಅವಧಿಗಳಿಗಿಂತ ಹೆಚ್ಚಿನ ಅವಧಿಗೆ ನೇಮಕಗೊಳ್ಳತಕ್ಕದ್ದಲ್ಲ.

**25. ಮಂಡಲಿಯ ಪ್ರಕಾರ್ಯಗಳು.–** ಮಂಡಲಿಯು ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಬಾಡಿಗೆ–ತಾಯ್ತನಕ್ಕೆ ಸಂಬಂಧಿಸಿರುವ ನೀತಿ ವಿಷಯಗಳ ಕುರಿತು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳ ಅನುಷ್ಠಾನವನ್ನು ಪರಿಶೀಲಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಮತ್ತು ಅದರಲ್ಲಿನ ಬದಲಾವಣೆಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(ಸಿ) ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಅನುಸರಿಸಬೇಕಾದ ನೀತಿ ಸಂಹಿತೆಯನ್ನು ನಿರೂಪಿಸುವುದು;

(ಡಿ) ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳು ಬಳಸಿಕೊಳ್ಳಬೇಕಾದ ಭೌತಿಕ ಮೂಲಸೌಕರ್ಯ, ಪ್ರಯೋಗಾಲಯ ಮತ್ತು ರೋಗಪತ್ತೆ ಸಾಧನಗಳು ಮತ್ತು ತಜ್ಞ ಮಾನವ ಬಲದ ಕನಿಷ್ಠ ಪ್ರಮಾಣಕಗಳನ್ನು ರೂಪಿಸುವುದು;

(ಇ) ಈ ಅಧಿನಿಯಮದ ಮೇರೆಗೆ ರಚನೆಯಾದ ವಿವಿಧ ನಿಕಾಯಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಯುಕ್ತ ಕ್ರಮಗಳನ್ನು ಕೈಗೊಳ್ಳುವುದು;

(ಎಫ್) ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು;

(ಜಿ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

**26. ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿಯ ರಚನೆ.–** ವಿಧಾನಮಂಡಲವನ್ನು ಹೊಂದಿರುವ ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶವು, ಸಂದರ್ಭಾನುಸಾರ, ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿ ಅಥವಾ ಕೇಂದ್ರಾಡಳಿತ ಪ್ರದೇಶ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್‌ತನ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕದ್ದು; ಇದು, ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(i) ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಸಮುಚಿತ ಪ್ರಾಧಿಕಾರಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸುವುದು ಮತ್ತು ಅವುಗಳ ವಿರುದ್ಧ ಸಮುಚಿತ ಕ್ರಮಕ್ಕೆ ಶಿಫಾರಸ್ಸು ಮಾಡುವುದು;

(ii) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳ ಉಪಬಂಧಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಮಂಡಲಿಗೆ ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು;

(iii) ಅಧಿನಿಯಮದ ಮೇರೆಗೆ ರಾಜ್ಯದಲ್ಲಿ ಕೈಗೊಳ್ಳಲಾದ ವಿವಿಧ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂಥ ಕ್ರೋಢೀಕೃತ ವರದಿಗಳನ್ನು ಮಂಡಲಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು; ಮತ್ತು

(iv) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

**27. ರಾಜ್ಯ ಮಂಡಲಿಯ ಸಂರಚನೆ.–** ಮಂಡಲಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,–

(ಎ) ರಾಜ್ಯದಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಮಂತ್ರಿ, ಅಧ್ಯಕ್ಷ, ಪದನಿಮಿತ್ತ;

(ಬಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ, ಉಪಾಧ್ಯಕ್ಷ, ಪದನಿಮಿತ್ತ;

(ಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ, ಕಾನೂನು ಮತ್ತು ನ್ಯಾಯ ಮತ್ತು ಗೃಹ ವ್ಯವಹಾರಗಳ ಇಲಾಖೆಗಳ ಪ್ರಭಾರ ಹೊಂದಿರುವ ಕಾರ್ಯದರ್ಶಿಗಳು ಅಥವಾ ಆಯುಕ್ತರು ಅಥವಾ ಅವರ ನಾಮನಿರ್ದೇಶಿತರು, ಸದಸ್ಯರು, ಪದನಿಮಿತ್ತ;

(ಡಿ) ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಮಹಾ ನಿರ್ದೇಶಕ, ಸದಸ್ಯ, ಪದನಿಮಿತ್ತ;

(ಇ) ರಾಜ್ಯ ವಿಧಾನಸಭೆಯ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನ ಪರಿಷತ್ತಿನ ಮೂವರು ಮಹಿಳಾ ಶಾಸಕರು, ಸದಸ್ಯರು, ಪದನಿಮಿತ್ತ;

(ಎಫ್) ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರವು ನೇಮಿಸಬೇಕಾದ ಹತ್ತು ತಜ್ಞ ಸದಸ್ಯರು, ಆ ಪೈಕಿ ನಿಯಮಿಸಬಹುದಾದಂಥ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರುವ ಕೆಳಕಂಡ ಕ್ಷೇತ್ರಗಳಿಂದ ತಲಾ ಇಬ್ಬರು,–

(i) ಖ್ಯಾತ ವೈದ್ಯಕೀಯ ತಳಿಶಾಸ್ತ್ರಜ್ಞ ಅಥವಾ ಭ್ರೂಣತಜ್ಞರು;

(ii) ಖ್ಯಾತ ಸ್ತ್ರೀರೋಗತಜ್ಞರು ಮತ್ತು ಪ್ರಸೂತಿತಜ್ಞರು;

(iii) ಖ್ಯಾತ ಸಮಾಜ ವಿಜ್ಞಾನಿಗಳು;

(iv) ಮಹಿಳಾ ಕಲ್ಯಾಣ ಸಂಘ–ಸಂಸ್ಥೆಗಳ ಪ್ರತಿನಿಧಿಗಳು; ಮತ್ತು

(v) ಮಹಿಳಾ ಆರೋಗ್ಯ ಮತ್ತು ಮಕ್ಕಳ ವಿಷಯಗಳಲ್ಲಿ ಕೆಲಸ ಮಾಡುತ್ತಿರುವ ನಾಗರಿಕ ಸಮಾಜದ ಪ್ರತಿನಿಧಿಗಳು;

(ಜಿ) ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ, ಒಬ್ಬರು ಅಧಿಕಾರಿ, ಪದನಿಮಿತ್ತ ಸದಸ್ಯ–ಕಾರ್ಯದರ್ಶಿಯಾಗಿರತಕ್ಕದ್ದು.

**28. ಸದಸ್ಯರ ಪದಾವಧಿ.–** (1) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಇತರ ಸದಸ್ಯನ ಪದಾವಧಿಯು,–

(ಎ) 27ನೇ ಪ್ರಕರಣದ ಖಂಡ (ಇ)ನ ಮೇರೆಗೆ ನಾಮನಿರ್ದೇಶನದ ಸಂದರ್ಭದಲ್ಲಿ, ಮೂರು ವರ್ಷಗಳಾಗಿರತಕ್ಕದ್ದು:

ಪರಂತು, ಅಂಥ ಸದಸ್ಯನು, ಮಂತ್ರಿ, ರಾಜ್ಯ ಮಂತ್ರಿ ಅಥವಾ ಉಪಮಂತ್ರಿ ಅಥವಾ ವಿಧಾನಸಭೆಯ ಸಭಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಅಥವಾ ವಿಧಾನ ಪರಿಷತ್ತಿನ ಉಪಸಭಾಪತಿಯಾದ ಕೂಡಲೇ ಅಥವಾ ಅವನು ಯಾವ ಸದನದಿಂದ ಆಯ್ಕೆಗೊಂಡನೋ ಆ ಸದನದ ಸದಸ್ಯತ್ವ ರದ್ದುಗೊಂಡ ಕೂಡಲೇ ಅವನ ಪದಾವಧಿ ಮುಕ್ತಾಯಗೊಳ್ಳತಕ್ಕದ್ದು; ಮತ್ತು

(ಬಿ) 27ನೇ ಪ್ರಕರಣದ ಖಂಡ (ಎಫ್)ನ ಮೇರೆಗೆ ನೇಮಕಗೊಂಡಿರುವ ಸಂದರ್ಭದಲ್ಲಿ, ಮೂರು ವರ್ಷಗಳಾಗಿರತಕ್ಕದ್ದು:

ಪರಂತು ಈ ಖಂಡದ ಮೇರೆಗೆ ಸದಸ್ಯನಾಗಿ ನೇಮಕಗೊಳ್ಳುವ ವ್ಯಕ್ತಿಯು ನಿಯಮಿಸಬಹುದಾದಂಥ ವಯೋಮಾನದವನಾಗಿರತಕ್ಕದ್ದು.

(2) ಆತನ ಮರಣ, ರಾಜೀನಾಮೆಯ ಕಾರಣದಿಂದಾಗಿ ಅಥವಾ ಅನಾರೋಗ್ಯ ಅಥವಾ ಇತರ ಅಸಾಮರ್ಥ್ಯದಿಂದ ಅವನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿನ ಅಸಮರ್ಥತೆ ಕಾರಣದಿಂದಾಗಿ ಪದದಲ್ಲಿ ಉಂಟಾಗುವ ಯಾವುದೇ ಖಾಲಿ ಪದವನ್ನು ರಾಜ್ಯ ಸರ್ಕಾರವು, ಅಂಥ ಪದವು ಖಾಲಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಹೊಸದಾಗಿ ನೇಮಕ ಮಾಡಿಕೊಳ್ಳುವ ಮೂಲಕ ಭರ್ತಿಮಾಡತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಸದಸ್ಯನು, ಅವನು ಯಾರ ಸ್ಥಾನದಲ್ಲಿ ಹಾಗೆ ನೇಮಕಗೊಂಡಿರುತ್ತಾನೋ ಅಂಥವನ ಉಳಿದ ಪದಾವಧಿಯವರೆಗೆ ಪದದಲ್ಲಿರತಕ್ಕದ್ದು.

(3) ಉಪಾಧ್ಯಕ್ಷನು ಕಾಲಕಾಲಕ್ಕೆ ಅಧ್ಯಕ್ಷನು ಆತನಿಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**29. ರಾಜ್ಯ ಮಂಡಲಿಯ ಸಭೆಗಳು.–** (1) ರಾಜ್ಯ ಮಂಡಲಿಯು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಕಾಲಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಯ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಒಳಗೊಂಡಂತೆ) ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

ಪರಂತು, ರಾಜ್ಯ ಮಂಡಲಿಯು ಕನಿಷ್ಠ ಪಕ್ಷ ನಾಲ್ಕು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಮಂಡಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ರಾಜ್ಯ ಮಂಡಲಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ರಾಜ್ಯ ಮಂಡಲಿಯ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ರಾಜ್ಯ ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತದಾನ ಮಾಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಹಾಗೂ ಮತಗಳು ಸಮ–ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ, ಸಭೆಯ ಅಧ್ಯಕ್ಷತೆ ವಹಿಸಿರುವ ಉಪಾಧ್ಯಕ್ಷನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರು, ರಾಜ್ಯ ಮಂಡಲಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ, ಪ್ರಯಾಣಕ್ಕೆ ತಗುಲಿದ ವೆಚ್ಚಗಳನ್ನು ಮಾತ್ರ ಸ್ವೀಕರಿಸತಕ್ಕದ್ದು.

**30. ಖಾಲಿಹುದ್ದೆ, ಮುಂತಾದವುಗಳಿಂದ, ರಾಜ್ಯ ಮಂಡಲಿಯ ವ್ಯವಹರಣೆಗಳು ಅಸಿಂಧುವಾಗದಿರುವುದು.–** ರಾಜ್ಯ ಮಂಡಲಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ರಾಜ್ಯ ಮಂಡಲಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ; ಅಥವಾ

(ಬಿ) ರಾಜ್ಯ ಮಂಡಲಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನತೆ; ಅಥವಾ

(ಸಿ) ರಾಜ್ಯ ಮಂಡಲಿಯ ಕಾರ್ಯವಿಧಾನದಲ್ಲಿ, ಮೊಕದ್ದಮೆಯ ಗುಣಾರ್ಹತೆಗಳಿಗೆ ಬಾಧಕವಾಗದಂಥ, ಯಾವುದೇ ಅಕ್ರಮತೆಯ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**31. ಸದಸ್ಯನಾಗಿ ನೇಮಕವಾಗುವುದಕ್ಕಾಗಿ ಅನರ್ಹತೆಗಳು.–** (1) ವ್ಯಕ್ತಿಯು,–

(ಎ) ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ಆತನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ; ಅಥವಾ

(ಇ) ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮ ಉಂಟುಮಾಡುವಂತೆ ತನ್ನ ಪದದಲ್ಲಿ ಮುಂದುವರಿಯುವುದಕ್ಕಾಗಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ;

(ಎಫ್) ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳನ್ನು ಪ್ರತಿನಿಧಿಸುವಂಥ ಯಾವುದೇ ಸಂಘದ ಕಾರ್ಯನಿರತ ಸದಸ್ಯ ಅಥವಾ ಪದಾಧಿಕಾರಿಯಾಗಿದ್ದು, ಸದಸ್ಯನಾಗಿ ಆತನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ; ಅಥವಾ

(ಜಿ) ಬಾಡಿಗೆ–ತಾಯ್ತನ ಅಥವಾ ಬಂಜೆತನ ಕುರಿತಾಗಿ ವಾಣಿಜ್ಯಕ ಆಸಕ್ತಿ ಹೊಂದಿರುವಂಥ ಯಾವುದೇ ವೃತ್ತಿಪರ ನಿಕಾಯಗಳನ್ನು ಮುನ್ನಡೆಸುವ ಅಥವಾ ಪ್ರತಿನಿಧಿಸುವ ಪದಾಧಿಕಾರಿಯಾಗಿದ್ದರೆ

– ಸದಸ್ಯನಾಗಿ ಆಯ್ಕೆಗೊಳ್ಳುವುದಕ್ಕೆ ಮತ್ತು ಸದಸ್ಯನಾಗಿ ಮುಂದುವರಿಯುವುದಕ್ಕೆ ಅನರ್ಹನಾಗಿರತಕ್ಕದ್ದು.

(2) 27ನೇ ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯರನ್ನು, ರಾಜ್ಯ ಸರ್ಕಾರವು ತಾನು ಈ ಬಗ್ಗೆ ನಿಯಮಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಚಾರಣೆ ನಡೆಸಿದ ಮೇಲೆ, ಅಂಥ ಸದಸ್ಯರ ದುರ್ವರ್ತನೆ ಅಥವಾ ಅಸಾಮರ್ಥ್ಯವು ಸಾಬೀತಾದ ಆಧಾರದ ಮೇಲೆ ಅಂಥ ಸದಸ್ಯರನ್ನು ಅಂಥ ಯಾವುದೇ ಕಾರಣಕ್ಕಾಗಿ ತೆಗೆದುಹಾಕಬೇಕೆಂಬ ನಿರ್ಣಯಕ್ಕೆ ಬಂದ ನಂತರ, ರಾಜ್ಯ ಸರ್ಕಾರವು ಈ ಸಂಬಂಧವಾಗಿ ಆದೇಶ ಹೊರಡಿಸಿದ ಹೊರತು, ಅವರನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಯಾವ ಸದಸ್ಯನ ವಿರುದ್ಧ (2)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ಪ್ರಾರಂಭಿಸಲಾಗಿದೆಯೋ ಅಥವಾ ಬಾಕಿಯಿದೆಯೋ ಅಂಥ ಯಾರೇ ಸದಸ್ಯನನ್ನು ರಾಜ್ಯ ಸರ್ಕಾರವು ವಿಚಾರಣಾ ವರದಿಯನ್ನು ಸ್ವೀಕರಿಸಿ, ಆದೇಶವನ್ನು ಹೊರಡಿಸುವವರೆಗೆ ಅಮಾನತುಗೊಳಿಸಬಹುದು.

**32. ನಿರ್ದಿಷ್ಟ ಉದ್ದೇಶಗಳಿಗಾಗಿ ರಾಜ್ಯ ಮಂಡಲಿಯು ತಾತ್ಕಾಲಿಕವಾಗಿ ವ್ಯಕ್ತಿಗಳನ್ನು ಸೇರಿಸಿಕೊಳ್ಳುವುದು.–** (1) ರಾಜ್ಯ ಮಂಡಲಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವ ವ್ಯಕ್ತಿಯ ನೆರವು ಅಥವಾ ಸಲಹೆಯನ್ನು ಅಪೇಕ್ಷಿಸಬಹುದೋ ಅಂಥ ವ್ಯಕ್ತಿಯನ್ನು ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ತನ್ನೊಂದಿಗೆ ಸೇರಿಸಿಕೊಳ್ಳಬಹುದು.

(2) ಉಪಪ್ರಕರಣ (1)ರ ಮೇರೆಗೆ ರಾಜ್ಯ ಮಂಡಲಿಯೊಂದಿಗೆ ಸೇರಿರುವ ವ್ಯಕ್ತಿಯು ಆ ಉದ್ದೇಶಕ್ಕೆ ಸಂಬಂಧಪಟ್ಟ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಹಕ್ಕು ಹೊಂದಿರತಕ್ಕದ್ದು, ಆದರೆ ರಾಜ್ಯ ಮಂಡಲಿಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕದ್ದಲ್ಲ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕದ್ದಲ್ಲ.

**33. ರಾಜ್ಯ ಮಂಡಲಿಯ ಆದೇಶಗಳು ಮತ್ತು ಇತರ ಲಿಖಿತಪತ್ರಗಳ ಪ್ರಮಾಣೀಕರಣ.–** ರಾಜ್ಯ ಮಂಡಲಿಯ ಎಲ್ಲಾ ಆದೇಶಗಳು ಮತ್ತು ನಿರ್ಣಯಗಳನ್ನು ಅಧ್ಯಕ್ಷನ ಸಹಿಯ ಮೂಲಕ ಪ್ರಮಾಣೀಕರಿಸತಕ್ಕದ್ದು ಮತ್ತು ರಾಜ್ಯ ಮಂಡಲಿ ಹೊರಡಿಸಿದ ಇತರ ಎಲ್ಲಾ ಲಿಖಿತಪತ್ರಗಳನ್ನು ರಾಜ್ಯ ಮಂಡಲಿಯ ಸದಸ್ಯ–ಕಾರ್ಯದರ್ಶಿಯ ಸಹಿಯ ಮೂಲಕ ಪ್ರಮಾಣೀಕರಿಸತಕ್ಕದ್ದು.

**34. ಮರು–ನೇಮಕಾತಿಗಾಗಿ ಸದಸ್ಯನ ಅರ್ಹತೆ.–** ಸದಸ್ಯನಾಗಿರುವುದು ನಿಂತುಹೋಗುವ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅಂಥ ಸದಸ್ಯನಾಗಿ ಮರು–ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು:

ಪರಂತು, ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿದ ಯಾರೇ ಸದಸ್ಯನು ನಿರಂತರ ಎರಡು ಅವಧಿಗಳಿಗಿಂತ ಹೆಚ್ಚಿನ ಅವಧಿಗೆ ನೇಮಕಗೊಳ್ಳತಕ್ಕದ್ದಲ್ಲ.

## ಅಧ್ಯಾಯ VI

## ಸಮುಚಿತ ಪ್ರಾಧಿಕಾರ

**35. ಸಮುಚಿತ ಪ್ರಾಧಿಕಾರದ ನೇಮಕ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ, ಈ ಅಧಿನಿಯಮದ ಮತ್ತು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದ ಉದ್ದೇಶಗಳಿಗಾಗಿ ಪ್ರತಿ ಕೇಂದ್ರಾಡಳಿತ ಪ್ರದೇಶಕ್ಕೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಮುಚಿತ ಪ್ರಾಧಿಕಾರಗಳನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ, ಈ ಅಧಿನಿಯಮದ ಮತ್ತು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಅಧಿನಿಯಮದ ಉದ್ದೇಶಗಳಿಗಾಗಿ ಸಂಪೂರ್ಣ ರಾಜ್ಯಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಮುಚಿತ ಪ್ರಾಧಿಕಾರಗಳನ್ನು ನೇಮಕ ಮಾಡತಕ್ಕದ್ದು.

(3) ಸಮುಚಿತ ಪ್ರಾಧಿಕಾರವು, (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಮೇರೆಗೆ,–

(ಎ) ಇಡೀ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕಾಗಿ ನೇಮಕ ಮಾಡಿದ್ದಾಗ ಅದು, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,–

(i) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ ದರ್ಜೆಯ ಅಥವಾ ಅದಕ್ಕಿಂತ ಮೇಲಿನ ದರ್ಜೆಯ ಅಧಿಕಾರಿ – ಅಧ್ಯಕ್ಷ, ಪದನಿಮಿತ್ತ;

(ii) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ದರ್ಜೆಯ ಅಥವಾ ಅದಕ್ಕಿಂತ ಮೇಲಿನ ದರ್ಜೆಯ ಅಧಿಕಾರಿ – ಉಪಾಧ್ಯಕ್ಷ, ಪದನಿಮಿತ್ತ;

(iii) ಮಹಿಳಾ ಸಂಘ ಸಂಸ್ಥೆಯನ್ನು ಪ್ರತಿನಿಧಿಸುವಂಥ ಒಬ್ಬರು ಖ್ಯಾತ ಮಹಿಳೆ - ಸದಸ್ಯ;

(iv) ಸಂಬಂಧಪಟ್ಟ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಕಾನೂನು ಇಲಾಖೆಯ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಒಬ್ಬ ಅಧಿಕಾರಿ - ಸದಸ್ಯ; ಮತ್ತು

(v) ನೋಂದಾಯಿತ ಖ್ಯಾತ ವೃತ್ತಿನಿರತ ವೈದ್ಯ – ಸದಸ್ಯ:

ಪರಂತು, ಪ್ರಾಧಿಕಾರದಲ್ಲಿ ಉಂಟಾಗುವ ಯಾವುದೇ ಖಾಲಿ ಸ್ಥಾನವನ್ನು ಅಂಥ ಖಾಲಿಸ್ಥಾನ ಉಂಟಾದ ಒಂದು ತಿಂಗಳೊಳಗಾಗಿ ಅದನ್ನು ಭರ್ತಿ ಮಾಡತಕ್ಕದ್ದು;

(ಬಿ) ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಯಾವುದೇ ಭಾಗಕ್ಕೆ ನೇಮಕಗೊಂಡಾಗ, ಸಂದರ್ಭಾನುಸಾರ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಯಾವುದೇ ದರ್ಜೆಯ ಅಧಿಕಾರಿಗಳಾಗಿರತಕ್ಕದ್ದು.

**36. ಸಮುಚಿತ ಪ್ರಾಧಿಕಾರದ ಪ್ರಕಾರ್ಯಗಳು.–** ಸಮುಚಿತ ಪ್ರಾಧಿಕಾರವು ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು,–

(ಎ) ಬಾಡಿಗೆ–ತಾಯ್ತನ ಚಿಕಿತ್ಸಾಲಯದ ನೋಂದಣಿಗೆ ಮಂಜೂರಾತಿ ನೀಡುವುದು, ಅಮಾನತು ಮಾಡುವುದು ಅಥವಾ ರದ್ದುಗೊಳಿಸುವುದು;

(ಬಿ) ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳು ಪೂರೈಸಬೇಕಾದ ಮಾನದಂಡಗಳನ್ನು ಜಾರಿ ಮಾಡುವುದು;

(ಸಿ) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ತನಿಖೆ ಮಾಡುವುದು ಮತ್ತು ಈ ಅಧಿನಿಯಮದ ಉಪಬಂಧದ ಪ್ರಕಾರ ಕಾನೂನು ಕ್ರಮ ಕೈಗೊಳ್ಳುವುದು;

(ಡಿ) ನಿಯಮಿಸದಿರುವ ಯಾವುದೇ ಸ್ಥಳದಲ್ಲಿ ಯಾರೇ ವ್ಯಕ್ತಿಯು ಬಾಡಿಗೆ–ತಾಯ್ತನ ಬಳಸುವುದರ ವಿರುದ್ಧ ಸ್ವಯಂಪ್ರೇರಿತವಾಗಿ ಅಥವಾ ತನ್ನ ಗಮನಕ್ಕೆ ಬಂದುದರ ಆಧಾರದ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು ಮತ್ತು ಅಂಥ ವಿಷಯದಲ್ಲಿ ಸ್ವತಂತ್ರ ತನಿಖೆಗಳನ್ನು ಸಹ ಕೈಗೊಳ್ಳುವುದು;

(ಇ) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು;

(ಎಫ್) ತಂತ್ರಜ್ಞಾನದಲ್ಲಿನ ಅಥವಾ ಸಾಮಾಜಿಕ ಪರಿಸ್ಥಿತಿಗಳಲ್ಲಿನ ಬದಲಾವಣೆಗಳಿಗೆ ಅನುಗುಣವಾಗಿ ನಿಯಮಗಳು ಮತ್ತು ವಿನಿಯಮಗಳಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡುವ ಬಗ್ಗೆ ಮಂಡಲಿಗೆ ಮತ್ತು ರಾಜ್ಯ ಮಂಡಲಿಗಳಿಗೆ ಶಿಫಾರಸ್ಸು ಮಾಡುವುದು;

(ಜಿ) ಅದು ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ವಿರುದ್ಧ ಸ್ವೀಕರಿಸುವಂಥ ದೂರುಗಳನ್ನು ತನಿಖೆ ಮಾಡಿ, ಕ್ರಮ ಕೈಗೊಳ್ಳುವುದು; ಮತ್ತು

(ಹೆಚ್) 3ನೇ ಪ್ರಕರಣದ (vi)ನೇ ಖಂಡದ ಮೇರೆಗಿನ ಮತ್ತು 4ನೇ ಪ್ರಕರಣದ (iii)ನೇ ಖಂಡದ (ಎ) ಮತ್ತು (ಸಿ) ಉಪಖಂಡಗಳ ಮೇರೆಗಿನ ಯಾವುದೇ ಅರ್ಜಿಯನ್ನು ತೊಂಬತ್ತು ದಿನಗಳ ಅವಧಿಯೊಳಗಾಗಿ ಪರಿಗಣಿಸುವುದು ಮತ್ತು ಮಂಜೂರು ಮಾಡುವುದು ಅಥವಾ ತಿರಸ್ಕರಿಸುವುದು.

**37. ಸಮುಚಿತ ಪ್ರಾಧಿಕಾರಗಳ ಅಧಿಕಾರಗಳು.–** (1) ಸಮುಚಿತ ಪ್ರಾಧಿಕಾರವು ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಉಲ್ಲಂಘನೆಗೆ ಸಂಬಂಧಿಸಿರುವ ಯಾವುದೇ ಮಾಹಿತಿಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು;

(ಬಿ) ಖಂಡ (ಎ)ಗೆ ಸಂಬಂಧಿಸಿರುವ ಯಾವುದೇ ದಸ್ತಾವೇಜು ಅಥವಾ ಸಾಮಗ್ರಿಯನ್ನು ಹಾಜರುಪಡಿಸುವುದು;

(ಸಿ) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ಉಲ್ಲಂಘನೆಯಾಗಿರುವುದಾಗಿ ಶಂಕಿಸಲಾದ ಯಾವುದೇ ಸ್ಥಳವನ್ನು ಶೋಧಿಸುವುದು;

(ಡಿ) ನಿಯಮಿಸಬಹುದಾದ ಇತರ ಅಧಿಕಾರಗಳು.

(2) ಸಮುಚಿತ ಪ್ರಾಧಿಕಾರವು, ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ನೋಂದಣಿ, ನೋಂದಣಿಯ ರದ್ದತಿ, ನೋಂದಣಿಯ ನವೀಕರಣ, ಮಗು ಬಯಸುವ ದಂಪತಿಗಳು ಮತ್ತು ಬಾಡಿಗೆ ತಾಯಂದಿರಿಗೆ ಪ್ರಮಾಣಪತ್ರಗಳನ್ನು ನೀಡುವುದು ಅಥವಾ ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳಿಗೆ ಪರವಾನಗಿ ಮುಂತಾದುವುಗಳನ್ನು ನೀಡುವುದಕ್ಕೆ ಸಂಬಂಧಿಸಿರುವ ಇತರ ಯಾವುದೇ ವಿಷಯದ ವಿವರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಅದನ್ನು ರಾಷ್ಟ್ರೀಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿಗೆ ಸಲ್ಲಿಸತಕ್ಕದ್ದು.

## ಅಧ್ಯಾಯ VII

## ಅಪರಾಧಗಳು ಮತ್ತು ದಂಡನೆಗಳು

**38. ವಾಣಿಜ್ಯೋದ್ದೇಶಿತ ಬಾಡಿಗೆ–ತಾಯ್ತನ, ಬಾಡಿಗೆ–ತಾಯಂದಿರ ಮತ್ತು ಬಾಡಿಗೆ–ತಾಯ್ತನದ ಮೂಲಕ ಜನಿಸಿದ ಮಕ್ಕಳ ಶೋಷಣೆಯ ನಿಷೇಧ.–** (1) ಯಾರೇ ವ್ಯಕ್ತಿ, ಸಂಸ್ಥೆ, ಬಾಡಿಗೆ–ತಾಯ್ತನ ಚಿಕಿತ್ಸಾಲಯ, ಪ್ರಯೋಗಾಲಯ ಅಥವಾ ಯಾವುದೇ ಬಗೆಯ ಚಿಕಿತ್ಸಾ ಕಾರ್ಯಸಂಸ್ಥೆಯು,–

(ಎ) ಅಂಥ ಚಿಕಿತ್ಸಾಲಯಗಳಲ್ಲಿ, ಪ್ರಯೋಗಾಲಯಗಳಲ್ಲಿ ಅಥವಾ ಇತರ ಯಾವುದೇ ಸ್ಥಳದಲ್ಲಿ ವಾಣಿಜ್ಯೋದ್ದೇಶಿತ ಬಾಡಿಗೆ–ತಾಯ್ತನ ಪ್ರಕ್ರಿಯೆ ನಡೆಸತಕ್ಕದ್ದಲ್ಲ, ವಾಣಿಜ್ಯೋದ್ದೇಶಿತ ಬಾಡಿಗೆ–ತಾಯ್ತನಕ್ಕಾಗಲೀ ಅಥವಾ ಯಾವುದೇ ರೂಪದಲ್ಲಿ ಅದಕ್ಕೆ ಸಂಬಂಧಪಟ್ಟ ಆಂಶಿಕ ಕಾರ್ಯವಿಧಾನಗಳಿಗೆ ಅಥವಾ ಸೇವೆಗಳಿಗೆ ಅವಕಾಶ ಕಲ್ಪಿಸತಕ್ಕದ್ದಲ್ಲ ಅಥವಾ ಬಾಡಿಗೆ ತಾಯಂದಿರ ಪಟ್ಟಿ ಮಾಡಲು ಅಥವಾ ಬಾಡಿಗೆ ತಾಯಂದಿರನ್ನು ಆಯ್ಕೆ ಮಾಡಲು ಕಾನೂನುಬಾಹಿರ ಚಟುವಟಿಕೆ ನಡೆಸತಕ್ಕದ್ದಲ್ಲ ಅಥವಾ ಸಂಘಟಿತ ಸಮೂಹವನ್ನು ಹೊಂದಿರತಕ್ಕದ್ದಲ್ಲ ಅಥವಾ ಬಾಡಿಗೆ ತಾಯಂದಿರನ್ನು ಏರ್ಪಾಡು ಮಾಡಲು ಮತ್ತು ಬಾಡಿಗೆ–ತಾಯ್ತನ ಕಾರ್ಯವಿಧಾನಗಳಿಗಾಗಿ ವ್ಯಕ್ತಿಗತ ದಲ್ಲಾಳಿಗಳು ಅಥವಾ ಮಧ್ಯವರ್ತಿಗಳನ್ನು ಬಳಸಿಕೊಳ್ಳತಕ್ಕದ್ದಲ್ಲ;

(ಬಿ) ವೈಜ್ಞಾನಿಕ ಅಥವಾ ಅನ್ಯಥಾ ಯಾವುದೇ ರೂಪದಲ್ಲಿಯೂ, ವಾಣಿಜ್ಯೋದ್ದೇಶಿತ ಬಾಡಿಗೆ–ತಾಯ್ತನಕ್ಕೆ ಸಂಬಂಧಪಟ್ಟ ಯಾವುದೇ ರೀತಿಯಲ್ಲಿ ಯಾವುದೇ ಜಾಹೀರಾತನ್ನು ಹೊರಡಿಸುವುದಾಗಲೀ, ಪ್ರಕಟಿಸುವುದಾಗಲೀ, ವಿತರಿಸುವುದಾಗಲೀ, ಸಂವಹನಗೊಳಿಸುವುದಾಗಲೀ ಮಾಡತಕ್ಕದ್ದಲ್ಲ ಅಥವಾ ಹೊರಡಿಸಲು, ಪ್ರಕಟಿಸಲು, ವಿತರಿಸಲು ಅಥವಾ ಸಂವಹನಗೊಳಿಸಲು ಕಾರಣವಾಗತಕ್ಕದ್ದಲ್ಲ;

(ಸಿ) ಬಾಡಿಗೆ–ತಾಯ್ತನದ ಮೂಲಕ ಜನಿಸಿದ ಮಗುವನ್ನು ಅಥವಾ ಮಕ್ಕಳನ್ನು ಯಾವುದೇ ರೀತಿಯಲ್ಲಿ ಪರಿತ್ಯಜಿಸುವುದಾಗಲೀ, ದೂರಮಾಡುವುದಾಗಲೀ ಅಥವಾ ಶೋಷಿಸುವುದಾಗಲೀ ಮಾಡತಕ್ಕದ್ದಲ್ಲ ಅಥವಾ ಪರಿತ್ಯಜಿಸಲು, ದೂರಮಾಡಲು ಅಥವಾ ಶೋಷಿಸಲು ಕಾರಣವಾಗತಕ್ಕದ್ದಲ್ಲ;

(ಡಿ) ಬಾಡಿಗೆ ತಾಯಿಯನ್ನು ಅಥವಾ ಬಾಡಿಗೆ–ತಾಯ್ತನದ ಮೂಲಕ ಜನಿಸಿದ ಮಗುವನ್ನು ಯಾವುದೇ ರೀತಿಯಲ್ಲಿಯೂ ಶೋಷಿಸತಕ್ಕದ್ದಲ್ಲ ಅಥವಾ ಶೋಷಿಸಲು ಕಾರಣವಾಗತಕ್ಕದ್ದಲ್ಲ;

(ಇ) ಬಾಡಿಗೆ–ತಾಯ್ತನದ ಉದ್ದೇಶಕ್ಕಾಗಿ ಮಾನವ ಭ್ರೂಣ ಅಥವಾ ಕೂಟಜೀವಕಣಗಳನ್ನು ಮಾರಾಟ ಮಾಡತಕ್ಕದ್ದಲ್ಲ ಮತ್ತು ಬಾಡಿಗೆ–ತಾಯ್ತನದ ಉದ್ದೇಶಕ್ಕಾಗಿ ಮಾನವ ಭ್ರೂಣಗಳು ಅಥವಾ ಕೂಟಜೀವಕಣಗಳನ್ನು ಮಾರಾಟ ಮಾಡಲು, ಖರೀದಿಸಲು ಅಥವಾ ವ್ಯಾಪಾರ ಮಾಡುವುದಕ್ಕಾಗಿ ಏಜೆನ್ಸಿ, ಕಾನೂನುಬಾಹಿರ ಚಟುವಟಿಕೆ ಅಥವಾ ಸಂಸ್ಥೆಯನ್ನು ನಡೆಸತಕ್ಕದ್ದಲ್ಲ;

(ಎಫ್) ಬಾಡಿಗೆ–ತಾಯ್ತನಕ್ಕಾಗಿ ಅಥವಾ ಬಾಡಿಗೆ–ತಾಯ್ತನದ ಕಾರ್ಯವಿಧಾನಗಳಿಗಾಗಿ ಮಾನವ ಭ್ರೂಣಗಳನ್ನು ಅಥವಾ ಮಾನವ ಕೂಟಜೀವಕಣಗಳನ್ನು ಯಾವುದೇ ರೀತಿಯಲ್ಲಿಯೂ ಆಮದು ಮಾಡಿಕೊಳ್ಳತಕ್ಕದ್ದಲ್ಲ ಅಥವಾ ಆಮದು ಮಾಡಿಕೊಳ್ಳಲು ಸಹಾಯ ಮಾಡತಕ್ಕದ್ದಲ್ಲ; ಮತ್ತು

(ಜಿ) ಬಾಡಿಗೆ–ತಾಯ್ತನಕ್ಕಾಗಿ ಯಾವುದೇ ವಿಧದಲ್ಲಿಯೂ ಲಿಂಗ ಆಯ್ಕೆಪರೀಕ್ಷೆ ನಡೆಸತಕ್ಕದ್ದಲ್ಲ.

(2) ಭಾರತ ದಂಡ ಸಂಹಿತೆ (1860ರ 45)ಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ವ್ಯಕ್ತಿಯು (1)ನೇ ಉಪಪ್ರಕರಣದ (ಎ) ಯಿಂದ (ಜಿ) ವರೆಗಿನ ಖಂಡಗಳ ಉಪಬಂಧಗಳನ್ನು ಉಲ್ಲಂಘಿಸುವುದು, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನಿಯವಾದ ಅಪರಾಧವಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ, "ಜಾಹೀರಾತು" ಎಂಬ ಪದವು, ವಿದ್ಯುನ್ಮಾನ ಅಥವಾ ಮುದ್ರಣ ರೂಪದಲ್ಲಿ ಅಂತರ್ಜಾಲ ಅಥವಾ ಇತರ ಯಾವುದೇ ಮಾಧ್ಯಮದ ಮೂಲಕ ನೀಡಲಾಗುವ ಜಾಹೀರಾತು ಸೇರಿದಂತೆ ಯಾವುದೇ ನೋಟೀಸು, ಸುತ್ತೋಲೆ, ಲೇಬಲ್ಲು, ಸುತ್ತುಹಾಳೆ ಅಥವಾ ಯಾವುದೇ ಇತರೆ ದಸ್ತಾವೇಜು ಒಳಗೊಂಡಿರುತ್ತದೆ ಮತ್ತು ಜಾಹೀರಾತು ಫಲಕ, ಭಿತ್ತಿಚಿತ್ರ, ಸಂಕೇತ ದೀಪ, ಧ್ವನಿ, ಧೂಮ ಅಥವಾ ಅನಿಲ ವಿಧಾನಗಳ ಮೂಲಕ ರಚಿಸಲಾದ ಯಾವುದೇ ಗೋಚರ ಪ್ರತಿಕೃತಿಗಳನ್ನು ಸಹ ಒಳಗೊಳ್ಳುತ್ತದೆ.

**39. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** (1) ಬಾಡಿಗೆ–ತಾಯ್ತನ ಚಿಕಿತ್ಸಾಲಯದ ಒಡೆತನ ಹೊಂದಿರುವ ಅಥವಾ ಅಂಥ ಚಿಕಿತ್ಸಾಲಯ ಅಥವಾ ಕೇಂದ್ರ ಅಥವಾ ಪ್ರಯೋಗಾಲಯದಲ್ಲಿ ಉದ್ಯೋಗದಲ್ಲಿರುವ ಮತ್ತು ಅಂಥ ಚಿಕಿತ್ಸಾಲಯ ಅಥವಾ ಕೇಂದ್ರ ಅಥವಾ ಪ್ರಯೋಗಾಲಯದಲ್ಲಿ ಅಥವಾ ಅವುಗಳಿಗೆ ಗೌರವಾರ್ಥ ಅಥವಾ ಅನ್ಯಥಾ ಆಧಾರದ ಮೇಲೆ ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳನ್ನು ಸಲ್ಲಿಸುವ ಯಾರೇ ನೋಂದಾಯಿತ ವೈದ್ಯ, ಸ್ತ್ರೀರೋಗತಜ್ಞರು, ಮಕ್ಕಳವೈದ್ಯತಜ್ಞ, ಭ್ರೂಣತಜ್ಞರು ಅಥವಾ ಇತರ ಯಾರೇ ವ್ಯಕ್ತಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು (38ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಉಪಬಂಧಗಳನ್ನು ಹೊರತುಪಡಿಸಿ) ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳನ್ನು ಉಲ್ಲಂಘಿಸಿದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಕಾರಾವಾಸದಿಂದ ಮತ್ತು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ, ತರುವಾಯದ ಅಥವಾ ನಿರಂತರ ಅಪರಾಧದ ಸಂದರ್ಭದಲ್ಲಿ, ಸಮುಚಿತ ಪ್ರಾಧಿಕಾರಿಯು, ಅಂಥ ನೋಂದಾಯಿತ ವೃತ್ತಿನಿರತ ವೈದ್ಯನ ಹೆಸರನ್ನು, ಐದು ವರ್ಷಗಳ ಅವಧಿಯವರೆಗೆ ಆತನ ನೋಂದಣಿಯನ್ನು ಅಮಾನತುಗೊಳಿಸುವುದೂ ಸೇರಿದಂತೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಸಂಬಂಧಪಟ್ಟ ರಾಜ್ಯ ವೈದ್ಯಕೀಯ ಪರಿಷತ್ತಿಗೆ ವರದಿ ಮಾಡತಕ್ಕದ್ದು.

**40. ಸದಾಶಯದ ಬಾಡಿಗೆ–ತಾಯ್ತನವನ್ನು ಅನುಸರಿಸದಿರುವುದಕ್ಕಾಗಿ ದಂಡನೆ.–** ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯ, ಪ್ರಯೋಗಾಲಯ ಅಥವಾ ನೋಂದಾಯಿತ ವೃತ್ತಿನಿರತ ವೈದ್ಯ, ಸ್ತ್ರೀರೋಗತಜ್ಞ, ಮಕ್ಕಳವೈದ್ಯತಜ್ಞ, ಭ್ರೂಣತಜ್ಞ ಅಥವಾ ಇತರ ಯಾರೇ ವ್ಯಕ್ತಿಯ ನೆರವನ್ನು ಕೋರುವ ಯಾರೇ ಮಗು ಬಯಸುವ ದಂಪತಿ ಅಥವಾ ಮಗು ಬಯಸುವ ಮಹಿಳೆ ಅಥವಾ ಯಾರೇ ವ್ಯಕ್ತಿಯು ಸದಾಶಯದ ಬಾಡಿಗೆ–ತಾಯ್ತನವನ್ನು ಅನುಸರಿಸದಿರುವುದಕ್ಕಾಗಿ ಅಥವಾ ವಾಣಿಜ್ಯಕ ಉದ್ದೇಶಗಳಿಂದ ಬಾಡಿಗೆ–ತಾಯ್ತನ ಕಾರ್ಯವಿಧಾನಗಳನ್ನು ನಡೆಸುವುದಕ್ಕಾಗಿ ಅವರು, ಮೊದಲ ಬಾರಿಯ ಅಪರಾಧಕ್ಕಾಗಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತರಾಗತಕ್ಕದ್ದು.

**41. ನಿರ್ದಿಷ್ಟ ದಂಡನೆಯನ್ನು ಉಪಬಂಧಿಸದಿರುವ ಅಧಿನಿಯಮದ ಉಪಬಂಧಗಳ ಅಥವಾ ನಿಯಮಗಳ ಉಲ್ಲಂಘನೆಗಾಗಿ ದಂಡನೆ.–** ಈ ಅಧಿನಿಯಮದಲ್ಲಿ ಯಾವುದೇ ದಂಡನೆಯನ್ನು ವಿಧಿಸದಿರುವ, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು, ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಅಥವಾ ವಿನಿಯಮಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ನಿರಂತರ ಉಲ್ಲಂಘನೆಯ ಸಂದರ್ಭದಲ್ಲಿ, ಅಂಥ ಉಲ್ಲಂಘನೆಗಾಗಿ ಮೊದಲಬಾರಿಗೆ ಅಪರಾಧ ನಿರ್ಣಯವಾದ ನಂತರ, ಅಂಥ ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**42. ಬಾಡಿಗೆ–ತಾಯ್ತನದ ಸಂದರ್ಭದಲ್ಲಿ ಪೂರ್ವಭಾವನೆ.–** ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನ್ಯಾಯಾಲಯವು, ಯಾರೇ ಮಹಿಳೆ ಅಥವಾ ಬಾಡಿಗೆ–ತಾಯಿಯನ್ನು, ಸಂದರ್ಭಾನುಸಾರ ಆಕೆಯ ಪತಿ, ಮಗು ಬಯಸುವ ದಂಪತಿ ಅಥವಾ ಯಾರೇ ಇತರ ಸಂಬಂಧಿಯು 4ನೇ ಪ್ರಕರಣದ (ii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂಥವುಗಳಿಗೆ ಹೊರತುಪಡಿಸಿದ ಉದ್ದೇಶಕ್ಕಾಗಿ, ಬಾಡಿಗೆ–ತಾಯ್ತನ ಸೇವೆಗಳನ್ನು ಒದಗಿಸಲು, ಕಾರ್ಯವಿಧಾನಗಳಿಗೆ ಒಳಪಡಲು ಅಥವಾ ಕೂಟಜೀವಕಣಗಳನ್ನು ದಾನ ಮಾಡಲು ಒತ್ತಾಯಪಡಿಸಲಾಗಿದೆ ಎಂಬುದು ಸಾಬೀತಾದ ಹೊರತು, ಒತ್ತಾಯಪಡಿಸಲಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಅಂಥ ವ್ಯಕ್ತಿಯು 40ನೇ ಪ್ರಕರಣದ ಮೇರೆಗಿನ ಅಂಥ ಅಪರಾಧದ ದುಷ್ಪ್ರೇರಣೆಯ ಹೊಣೆಗಾರನಾಗತಕ್ಕದ್ದು ಮತ್ತು ಆ ಪ್ರಕರಣದ ಮೇರೆಗೆ ಅಂಥ ಅಪರಾಧಕ್ಕೆ ಗೊತ್ತುಪಡಿಸಲಾದ ಶಿಕ್ಷೆಗೆ ಗುರಿಯಾಗತಕ್ಕದ್ದು.

**43. ಸಂಜ್ಞೇಯ, ಜಾಮೀನು ರಹಿತ ಮತ್ತು ರಾಜಿ ಮಾಡಿಕೊಳ್ಳಲಾಗದ ಅಪರಾಧ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವು ಸಂಜ್ಞೇಯ, ಜಾಮೀನು ರಹಿತ ಮತ್ತು ರಾಜಿ ಮಾಡಿಕೊಳ್ಳಲಾಗದ ಅಪರಾಧವಾಗಿರತಕ್ಕದ್ದು.

**44. ಅಪರಾಧಗಳ ಸಂಜ್ಞೇಯತೆ.–** (1) ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು,–

(ಎ) ಸಂಬಂಧಪಟ್ಟ ಸಮುಚಿತ ಪ್ರಾಧಿಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಅಧಿಕಾರಿ ಅಥವಾ ಏಜೆನ್ಸಿಯು ಅಥವಾ ಸಮುಚಿತ ಪ್ರಾಧಿಕಾರವು; ಅಥವಾ

(ಬಿ) ಆರೋಪಿತ ಅಪರಾಧ ಮತ್ತು ನ್ಯಾಯಾಲಯಕ್ಕೆ ದೂರು ಸಲ್ಲಿಸುವ ತನ್ನ ಉದ್ದೇಶದ ಬಗ್ಗೆ ನಿಯಮಿಸಿದ ರೀತಿಯಲ್ಲಿ ಹದಿನೈದು ದಿನಗಳಿಗೆ ಕಡಿಮೆಯಿಲ್ಲದಂತೆ ಸಮುಚಿತ ಪ್ರಾಧಿಕಾರಕ್ಕೆ ನೋಟೀಸು ನೀಡುವ ಸಾಮಾಜಿಕ ಸಂಸ್ಥೆಯೂ ಸೇರಿದಂತೆ ಯಾರೇ ವ್ಯಕ್ತಿಯು

– ಲಿಖಿತದಲ್ಲಿ ದೂರನ್ನು ಸಲ್ಲಿಸಿದ ಹೊರತು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಅಥವಾ ಮೊದಲನೇ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

**45. ದಂಡ ಪ್ರಕ್ರಿಯಾ ಸಂಹಿತೆ, 1973ರ ಕೆಲವೊಂದು ಉಪಬಂಧಗಳು ಅನ್ವಯಿಸದಿರುವುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕಡಿಮೆ ದಂಡನೆಗೆ ಕೋರಿಕೆ ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಪಟ್ಟ, ಸದರಿ ಸಂಹಿತೆಯ ಅಧ್ಯಾಯ XXI-ಎ ಯು ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ VIII

### ಸಂಕೀರ್ಣ

**46. ದಾಖಲೆಗಳ ನಿರ್ವಹಣೆ.–** (1) ಬಾಡಿಗೆ–ತಾಯ್ತನ ಚಿಕಿತ್ಸಾಲಯವು ಎಲ್ಲಾ ದಾಖಲೆಗಳು, ನಕ್ಷೆಗಳು, ನಮೂನೆಗಳು, ವರದಿಗಳು, ಸಮ್ಮತಿ ಪತ್ರಗಳು, ಒಪ್ಪಂದಗಳು ಮತ್ತು ಈ ಅಧಿನಿಯಮದ ಮೇರೆಗಿನ ಎಲ್ಲಾ ದಸ್ತಾವೇಜುಗಳನ್ನು ನಿರ್ವಹಿಸತಕ್ಕದ್ದು ಮತ್ತು ಅವುಗಳನ್ನು ಇಪ್ಪತ್ತೈದು ವರ್ಷಗಳ ಅವಧಿಯವರೆಗೆ ಅಥವಾ ನಿಯಮಿಸಬಹುದಾದಂಥ ಅವಧಿಯವರೆಗೆ ಸಂರಕ್ಷಿಸಿಡತಕ್ಕದ್ದು:

ಪರಂತು, ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯದ ವಿರುದ್ಧ ಯಾವುದೇ ಅಪರಾಧಿಕ ಅಥವಾ ಇತರ ವ್ಯವಹರಣೆಗಳನ್ನು ಹೂಡಲಾಗಿದ್ದರೆ, ಅಂಥ ಚಿಕಿತ್ಸಾಲಯದ ದಾಖಲೆಗಳು ಮತ್ತು ಇತರ ಎಲ್ಲಾ ದಸ್ತಾವೇಜುಗಳನ್ನು ಅಂಥ ವ್ಯವಹರಣೆಗಳನ್ನು ಅಂತಿಮವಾಗಿ ವಿಲೇವಾರಿಯಾಗುವವರೆಗೆ ಸಂರಕ್ಷಿಸಿಡತಕ್ಕದ್ದು.

(2) ಅಂಥ ಎಲ್ಲಾ ದಾಖಲೆಗಳನ್ನು ತಪಾಸಣೆ ಮಾಡುವುದಕ್ಕಾಗಿ ಸಮುಚಿತ ಪ್ರಾಧಿಕಾರಕ್ಕೆ ಅಥವಾ ಸಮುಚಿತ ಪ್ರಾಧಿಕಾರವು ಈ ಸಂಬಂಧವಾಗಿ ಅಧಿಕೃತಗೊಳಿಸಿದ ಇತರ ಯಾರೇ ವ್ಯಕ್ತಿಗೆ ಎಲ್ಲಾ ಯುಕ್ತ ಸಮಯಗಳಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

**47. ದಾಖಲೆ, ಮುಂತಾದವುಗಳ ಶೋಧನೆ ಮತ್ತು ಜಪ್ತಿ ಅಧಿಕಾರ.–** (1) ಯಾವುದೇ ಬಾಡಿಗೆ–ತಾಯ್ತನ ಚಿಕಿತ್ಸಾಲಯದಲ್ಲಿ ಅಥವಾ ಇತರ ಯಾವುದೇ ಸ್ಥಳದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧವು ನಡೆದಿರುವುದಾಗಿ ಅಥವಾ ನಡೆಯುತ್ತಿರುವುದಾಗಿ ನಂಬಲು ಸಮುಚಿತ ಪ್ರಾಧಿಕಾರಕ್ಕೆ ಕಾರಣವಿದ್ದರೆ, ಅಂಥ ಪ್ರಾಧಿಕಾರ ಅಥವಾ ಈ ಸಂಬಂಧವಾಗಿ ಅಧಿಕೃತನಾದ ಯಾರೇ ಅಧಿಕಾರಿಯು, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಅಂಥ ಪ್ರಾಧಿಕಾರ ಅಥವಾ ಅಧಿಕಾರಿಗಳು ತಾವು ಅಗತ್ಯವೆಂದು ಪರಿಗಣಿಸುವಂಥ ನೆರವು ಏನಾದರೂ ಇದ್ದರೆ, ಅಂಥ ನೆರವನ್ನು ಪಡೆದುಕೊಂಡು ಎಲ್ಲಾ ಯುಕ್ತ ಸಮಯದಲ್ಲಿ ಅಂಥ ಬಾಡಿಗೆ–ತಾಯ್ತನ ಚಿಕಿತ್ಸಾಲಯ ಅಥವಾ ಇತರ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು ಮತ್ತು ಅಲ್ಲಿ ಸಿಗುವ ಯಾವುದೇ ದಾಖಲೆ, ವಹಿ, ದಸ್ತಾವೇಜು, ಪುಸ್ತಕ, ಕರಪತ್ರ, ಜಾಹೀರಾತು ಅಥವಾ ಇತರ ಯಾವುದೇ ವಿಷಯ ವಸ್ತುವನ್ನು ಪರಿಶೀಲಿಸಬಹುದು ಮತ್ತು ಅಂಥ ಪ್ರಾಧಿಕಾರ ಅಥವಾ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿರುವುದರ ಸಾಕ್ಷ್ಯವನ್ನು ಅದು ಒದಗಿಸಬಹುದಾಗಿದೆ ಎಂದು ನಂಬಲು ಕಾರಣವಿದ್ದರೆ, ಅದನ್ನು ಜಪ್ತಿ ಮಾಡಿ ಮೊಹರು ಮಾಡಬಹುದು.

(2) ಶೋಧನೆ ಮತ್ತು ಜಪ್ತಿಗೆ ಸಂಬಂಧಿಸಿದ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಈ ಅಧಿನಿಯಮದ ಮೇರೆಗಿನ ಸಮುಚಿತ ಪ್ರಾಧಿಕಾರ ಅಥವಾ ಅದು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಕೈಗೊಂಡ ಎಲ್ಲಾ ಕ್ರಮಗಳಿಗೆ ಅನ್ವಯವಾಗತಕ್ಕದ್ದು.

**48. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸದುದ್ದೇಶದಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸಮುಚಿತ ಪ್ರಾಧಿಕಾರದ ವಿರುದ್ಧ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಸಮುಚಿತ ಪ್ರಾಧಿಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

**49. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧಿಸುವುದಿಲ್ಲ.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

**50. ನಿಯಮಗಳನ್ನು ರಚಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ–ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳನ್ನು ಈ ಮುಂದಿನ ವಿಷಯಗಳಿಗಾಗಿ ಉಪಬಂಧಿಸಬಹುದು,–

(ಎ) 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ), (ಎಫ್) ಮತ್ತು (ಕ್ಯೂ) ಖಂಡಗಳ ಮೇರೆಗೆ ನಿಯಮಿಸಲಾದ ವೆಚ್ಚಗಳು;

(ಬಿ) 3ನೇ ಪ್ರಕರಣದ (iii)ನೇ ಖಂಡದ ಮೇರೆಗೆ ನೋಂದಾಯಿತವಾದ ಬಾಡಿಗೆ–ತಾಯ್ತನ ಚಿಕಿತ್ಸಾಲಯಕ್ಕೆ ನೇಮಕಗೊಳ್ಳುವ ವ್ಯಕ್ತಿಗಳ ಕನಿಷ್ಠ ವಿದ್ಯಾರ್ಹತೆ;

(ಸಿ) 3ನೇ ಪ್ರಕರಣದ (vii)ನೇ ಖಂಡದ ಮೇರೆಗೆ ವ್ಯಕ್ತಿಯು ಮಾನವ ಭ್ರೂಣ ಅಥವಾ ಕೂಟಜೀವಕಣವನ್ನು ಶೇಖರಿಸಬಹುದಾದ ಅವಧಿ ಮತ್ತು ರೀತಿ;

(ಡಿ) 4ನೇ ಪ್ರಕರಣದ (ii)ನೇ ಖಂಡದ (ಎ) ಉಪಖಂಡದ ಪರಂತುಕದ ಮೇರೆಗೆ ಮಂಡಲಿಯಿಂದ ಶಿಫಾರಸ್ಸು ಪ್ರಮಾಣಪತ್ರವನ್ನು ಪಡೆಯುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ;

(ಇ) 4ನೇ ಪ್ರಕರಣದ (iii)ನೇ ಖಂಡದ (ಎ) ಉಪಖಂಡದ (III)ನೇ ಬಾಬಿನ ಮೇರೆಗೆ ವಿಮಾ ಕಂಪನಿಯಿಂದ ಬಾಡಿಗೆ–ತಾಯಿಗೆ ದೊರಕುವ ವಿಮಾರಕ್ಷಣೆ ಮತ್ತು ಅಂಥ ರಕ್ಷಣೆಯ ರೀತಿ;

(ಎಫ್) 4ನೇ ಪ್ರಕರಣದ (iii)ನೇ ಖಂಡದ (ಬಿ) ಉಪಖಂಡದ (III)ನೇ ಬಾಬಿನ ಪರಂತುಕದ ಮೇರೆಗೆ ಬಾಡಿಗೆ–ತಾಯ್ತನದ ಪ್ರಯತ್ನಗಳು ಅಥವಾ ಕೂಟಜೀವಕಣಗಳನ್ನು ಒದಗಿಸುವುದರ ಸಂಖ್ಯೆ;

(ಜಿ) 6ನೇ ಪ್ರಕರಣದ (ii)ನೇ ಖಂಡದ ಮೇರೆಗೆ ಬಾಡಿಗೆ ತಾಯಿಯ ಸಮ್ಮತಿ ಪಡೆಯಬೇಕಾದ ನಮೂನೆ;

(ಹೆಚ್) 9ನೇ ಪ್ರಕರಣದ ಮೇರೆಗೆ ಬಾಡಿಗೆ ತಾಯಿಯ ಗರ್ಭಕೋಶಕ್ಕೆ ಅಂತರ್ನಿವೇಶಿಸಬೇಕಾದ ಅಂಡಾಶಯಕಣ (ಓಅಸೈಟು)ಗಳು ಅಥವಾ ಭ್ರೂಣಗಳ ಸಂಖ್ಯೆ;

(ಐ) 10ನೇ ಪ್ರಕರಣದ ಮೇರೆಗೆ ಬಾಡಿಗೆ–ತಾಯ್ತನ ಪ್ರಕ್ರಿಯೆಯ ಅವಧಿಯಲ್ಲಿ ಬಾಡಿಗೆ–ತಾಯಿಗೆ ಗರ್ಭಪಾತಕ್ಕೆ ಅನುಮತಿಸಬಹುದಾದ ಷರತ್ತುಗಳು;

(ಜೆ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ ಮತ್ತು ಅದಕ್ಕಾಗಿ ಪಾವತಿಸಬೇಕಾದ ಶುಲ್ಕ;

(ಕೆ) 11ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳು ಒದಗಿಸಬೇಕಾದ ಸೌಕರ್ಯಗಳು, ನಿರ್ವಹಿಸಬೇಕಾದ ಸಾಧನ ಸಾಮಗ್ರಿಗಳು ಮತ್ತು ಇತರ ಪ್ರಮಾಣಕಗಳು;

(ಎಲ್) 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೀಡಬೇಕಾದ ನೋಂದಣಿ ಪ್ರಮಾಣಪತ್ರದ ಅವಧಿ, ರೀತಿ ಮತ್ತು ನಮೂನೆ;

(ಎಂ) 12ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಬೇಕಾದ ರೀತಿ ಮತ್ತು ಅಂಥ ನವೀಕರಣಕ್ಕಾಗಿ ಪಾವತಿಸಬೇಕಾದ ಶುಲ್ಕ;

(ಎನ್) 14ನೇ ಪ್ರಕರಣದ ಮೇರೆಗೆ ಅಪೀಲು ಸಲ್ಲಿಸಬಹುದಾದ ರೀತಿ;

(ಒ) 17ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಅಂಗೀಕಾರಾರ್ಹವಾದ ಸದಸ್ಯರ ಅರ್ಹತೆಗಳು ಮತ್ತು ಅನುಭವಗಳು;

(ಪಿ) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸದಸ್ಯರ ವಿರುದ್ಧ ವಿಚಾರಣೆ ನಡೆಸುವುದಕ್ಕಾಗಿನ ಕಾರ್ಯವಿಧಾನಗಳು;

(ಕ್ಯೂ) 24ನೇ ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯನು ಮರು–ನೇಮಕಗೊಳ್ಳಲು ಹೊಂದಿರಬೇಕಾದ ಅರ್ಹತಾ ಷರತ್ತುಗಳು;

(ಆರ್) 25ನೇ ಪ್ರಕರಣದ (ಜಿ) ಖಂಡದ ಮೇರೆಗೆ ಮಂಡಲಿಯ ಇತರ ಪ್ರಕಾರ್ಯಗಳು;

(ಎಸ್) 26ನೇ ಪ್ರಕರಣದ (iii)ನೇ ಖಂಡದ ಮೇರೆಗೆ ರಾಜ್ಯ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿ ಮತ್ತು ಕೇಂದ್ರಾಡಳಿತ ಪ್ರದೇಶ ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ ಮತ್ತು ಬಾಡಿಗೆ–ತಾಯ್ತನ ಮಂಡಲಿಯು ತಮ್ಮ ವರದಿಗಳನ್ನು ಮಂಡಲಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ರೀತಿ;

(ಟಿ) 26ನೇ ಪ್ರಕರಣದ (iv)ನೇ ಖಂಡದ ಮೇರೆಗೆ ರಾಜ್ಯ ಮಂಡಲಿಯ ಇತರ ಪ್ರಕಾರ್ಯಗಳು;

(ಯು) 27ನೇ ಪ್ರಕರಣದ ಖಂಡ (ಎಫ್)ನ ಮೇರೆಗೆ ಅಂಗೀಕಾರಾರ್ಹವಾದ ಸದಸ್ಯರ ಅರ್ಹತೆಗಳು ಮತ್ತು ಅನುಭವಗಳು;

(ವಿ) 28ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಪರಂತುಕದ ಮೇರೆಗೆ 27ನೇ ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದಂತೆ, ಸದಸ್ಯನಾಗಿ ನೇಮಕಗೊಳ್ಳುವ ವ್ಯಕ್ತಿಯ ವಯಸ್ಸು;

(ಡಬ್ಲ್ಯೂ) 31ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸದಸ್ಯರ ವಿರುದ್ಧ ವಿಚಾರಣೆ ನಡೆಸುವುದಕ್ಕಾಗಿನ ಕಾರ್ಯವಿಧಾನಗಳು;

(ಎಕ್ಸ್) 34ನೇ ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯನು ಮರು–ನೇಮಕಗೊಳ್ಳಲು ಹೊಂದಿರಬೇಕಾದ ಅರ್ಹತಾ ಷರತ್ತುಗಳು;

(ವೈ) 36ನೇ ಪ್ರಕರಣದ (ಡಿ) ಖಂಡದ ಮೇರೆಗಿನ ಇತರ ಯಾವುದೇ ವಿಷಯದಲ್ಲಿ ಸಮುಚಿತ ಪ್ರಾಧಿಕಾರಕ್ಕೆ ಅಧಿಕಾರ ನೀಡುವುದು;

(ಝೆಡ್) 37ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಸಮುಚಿತ ಪ್ರಾಧಿಕಾರದ ಇತರ ಅಧಿಕಾರಗಳು;

(ಝೆಡ್ಎ) 37ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಬಾಡಿಗೆ–ತಾಯ್ತನ ಚಿಕಿತ್ಸಾಲಯಗಳ ನೋಂದಣಿ, ನೋಂದಣಿ ರದ್ಧತಿ, ಇತ್ಯಾದಿ ವಿವರಗಳು ಇರಬೇಕಾದ ನಮೂನೆ;

(ಝೆಡ್ಬಿ) 44ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ವ್ಯಕ್ತಿಯು ನೋಟೀಸನ್ನು ನೀಡುವ ರೀತಿ;

(ಝೆಡ್ಸಿ) 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಾಖಲೆಗಳು, ನಕ್ಷೆಗಳು, ಇತ್ಯಾದಿಯನ್ನು ಸಂರಕ್ಷಿಸಿಡಬೇಕಾದ ಅವಧಿ;

(ಝೆಡ್ಡಿ) 47ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಸ್ತಾವೇಜುಗಳು, ದಾಖಲೆಗಳು, ವಸ್ತುಗಳು, ಇತ್ಯಾದಿಯನ್ನು ಜಪ್ತಿ ಮಾಡಬೇಕಾದ ರೀತಿ ಮತ್ತು ಜಪ್ತಿ ಪಟ್ಟಿಯನ್ನು ಸಿದ್ಧಪಡಿಸಬೇಕಾದ ಮತ್ತು ಒಪ್ಪಿಸಬೇಕಾದ ರೀತಿ;

(ಝೆಡ್ಇ) ಯಾವ ವಿಷಯವನ್ನು ನಿಯಮಗಳ ಮೂಲಕ ಉಪಬಂಧಿಸಬೇಕೋ ಅಥವಾ ಉಪಬಂಧಿಸಬಹುದೋ ಅಂಥ ಇತರ ಯಾವುದೇ ವಿಷಯ.

**51. ವಿನಿಯಮಗಳನ್ನು ರಚಿಸುವ ಅಧಿಕಾರ.–** ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಅಧಿಸೂಚನೆ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ ಈ ಕೆಳಕಂಡ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ವಿನಿಯಮನಗಳನ್ನು ರಚಿಸಬಹುದು,–

(ಎ) 4ನೇ ಪ್ರಕರಣದ ಖಂಡ (v)ರ ಉಪಖಂಡ (ಡಿ)ಯ ಮೇರೆಗೆ ಸಮುಚಿತ ಪ್ರಾಧಿಕಾರವು ಯಾವ ಷರತ್ತುಗಳ ಅಡಿಯಲ್ಲಿ ಅರ್ಹತಾ ಪ್ರಮಾಣಪತ್ರವನ್ನು ನೀಡಬೇಕಾಗುತ್ತದೆಯೋ ಆ ಯಾವುದೇ ಇತರ ಷರತ್ತನ್ನು ನೆರವೇರಿಸಲು;

(ಬಿ) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸಭೆಗಳ ಸಮಯ ಮತ್ತು ಸ್ಥಳ ಮತ್ತು ಅಂಥ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆ;

(ಸಿ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಮಂಡಲಿಗೆ ಸೇರಿಸಿಕೊಳ್ಳಬಹುದಾದ ರೀತಿ;

(ಡಿ) 29ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಸಭೆಗಳ ಸಮಯ ಮತ್ತು ಸ್ಥಳ ಮತ್ತು ಅಂಥ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆ;

(ಇ) 32ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು ಮಂಡಲಿಗೆ ತಾತ್ಕಾಲಿಕವಾಗಿ ತೊಡಗಿಸಿಕೊಳ್ಳಬಹುದಾದ ರೀತಿ;

(ಎಫ್) ಯಾವ ವಿಷಯವನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬೇಕೋ ಅಥವಾ ನಿರ್ದಿಷ್ಟಪಡಿಸಬಹುದೋ ಆ ಯಾವುದೇ ಇತರ ವಿಷಯ.

**52. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಮಂಡಲಿ ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮ ಅಥವಾ ವಿನಿಯಮವು ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ವಿನಿಯಮ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**53. ತಾತ್ಕಾಲಿಕ ಉಪಬಂಧ.–** ಪ್ರಸ್ತುತ ಬಾಡಿಗೆ–ತಾಯಂದಿರ ಆರೋಗ್ಯ ಸ್ಥಿತಿಯನ್ನು ಕಾಪಾಡುವುದಕ್ಕಾಗಿ ಅವರಿಗೆ, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಹತ್ತು ತಿಂಗಳ ಗರ್ಭಾವಸ್ಥೆ ಅವಧಿಯನ್ನು ಒದಗಿಸತಕ್ಕದ್ದು.

**54. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅಂಥ ತೊಂದರೆ ನಿವಾರಿಸಲು ಅವಶ್ಯ ಅಥವಾ ವಿಹಿತವೆಂದು ತನಗೆ ಕಂಡುಬರಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

---

ಡಾ. ರಾಜೀವ್ ಮಣಿ

ಭಾರತ ಸರ್ಕಾರದ ಕಾರ್ಯದರ್ಶಿ